# ಲಿಕುಚಕುಲ(ಪೆಜತ್ತಾಯ)ಪಂಡಿತಾಚಾರ್ಯರ ಗ್ರಂಥಗಳ ಪರೀಕ್ಷೆ : ೨೦೨೨-೨೩

## ಮಧ್ವವಿಜಯದ ಬಹು ಆಯ್ಕೆಯ ಪ್ರಶ್ನಕೋಶ

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಕಥಾಭಾಗ |
|---|---|---|---|---|
| | **ಗ್ರಂಥ ಪರಿಚಯ** | | | |
| ೦೧ | ಮಧ್ವಾಚಾರ್ಯರ ಸಮಕಾಲದಲ್ಲಿಯೇರಚಿತವಾದ ಮಧ್ವಾಚಾರ್ಯರಚರಿತ್ರೆಯನ್ನು ಹೇಳುವ ಗ್ರಂಥಯಾವುದು ? | ಮಧ್ವವಿಜಯ | .. | ಪರಿಚಯ |
| ೦೨ | ಮಧ್ವವಿಜಯವನ್ನು ರಚಿಸಿದವರಾರು ? | ನಾರಾಯಣ ಪಂಡಿತಾಚಾರ್ಯರು | .. | |
| ೦೩ | ಮಧ್ವವಿಜಯಕ್ಕೆ ಗ್ರಂಥಕರ್ತೃಗಳೇ ಬರೆದ ವ್ಯಾಖ್ಯಾನಯಾವುದು? | ಭಾವ ಪ್ರಕಾಶಿಕಾ | .. | |
| ೦೪ | ಸಮಗ್ರ ಮಧ್ವವಿಜಯದ ಸಾರವನ್ನು ಪ್ರತಿನಿತ್ಯ ಪಾರಾಯಣ ಮಾಡಲು ಅನುಕೂಲವಾಗುವ ನಾರಾಯಣ ಪಂಡಿತಾಚಾರ್ಯರ ಮತ್ತೊಂದುಗ್ರಂಥಯಾವುದು ? | ಪ್ರಮೇಯನವಮಾಲಿಕಾ | .. | |
| | **ಸರ್ಗ ೧** | | | |
| ೦೧ | ತತ್ವಪ್ರದೀಪವನ್ನು ರಚಿಸಿದವರು ಯಾರು? | ತ್ರಿವಿಕ್ರಮ ಪಂಡಿತಾಚಾರ್ಯರು | ೦೪ | ಗ್ರಂಥರಚನೆಯ ಹಿನ್ನಲೆ |
| ೦೨ | ನಾರಾಯಣ ಪಂಡಿತಾಚಾರ್ಯರು ಮಧ್ವವಿಜಯವನ್ನು ರಚಿಸುವ ಉದ್ದೇಶವೇನು ? | ಗುರುಭಕ್ತಿಯಿಂದ ಹುಟ್ಟುವ ಹರಿಭಕ್ತಿಗಾಗಿ | ೦೫ | |
| ೦೩ | ಮಹಾತ್ಮರ ಚರಿತ್ರೆಯನ್ನು ಕೀರ್ತನೆ ಮಾಡಿದರೆ ಆಗುವ ಲಾಭವೇನು? | ಮನ:ಶುದ್ಧಿ | ೦೭ | |
| ೦೪ | ಕೇಸರಿಯ ಮಗನಾದ ಹನುಮಂತ ಯಾರಅವತಾರ? | ಮುಖ್ಯಪ್ರಾಣದೇವರ | ೦೯ | ಹನುಮ ಚರಿತ್ರೆ |
| ೦೫ | ಸೀತೆಗೆ ತೊಂದರೆ ಕೊಟ್ಟರಾವಣನನ್ನು ಹನುಮಂತ ಹೇಗೆ ಶಿಕ್ಷಿಸಿದ ? | ಮುಷ್ಟಿ ಪ್ರಹಾರ | ೧೭ | |
| ೦೬ | ಹನುಮಂತ ಗಂದಮಾಧನ ಪರ್ವತವನ್ನು ತರುವಾಗ ಪಟ್ಟ ಪ್ರಯತ್ನಕ್ಕಿಂತಲೂ ಹೆಚ್ಚು ಪ್ರಯತ್ನ,ಜಾಗೃತೆ ವಹಿಸಿದ್ದು ಯಾವಾಗ? | ರಾಮಪೂಜೆಗಾಗಿ ಹೂವನ್ನುತರುವಾಗ | ೧೯ | |
| ೦೭ | ರಾಮ ಸೀತೆಗೆ 'ನನ್ನ ವಿಶೇಷ ಸೇವೆ ಮಾಡಿದವರಿಗೆ ಈ ಹಾರವನ್ನು ಹಾಕು' ಎಂದಾಗ ಯಾರಿಗೆ ಹಾರ ಹಾಕಿದಳು ? | ಹನುಮಂತನಿಗೆ | ೨೨ | |
| ೦೮ | ಹನುಮಂತನ ಸೇವೆಗೆ ಶ್ರೀರಾಮ ನೀಡಿದ ಉಡುಗೊರೆ ಏನು? | ಸಹಭೋಗ (ಬ್ರಹ್ಮಪದವಿ) | ೨೩ | |
| ೦೯ | ವೈಭವದ ರಾಮರಾಜ್ಯದಲ್ಲಿ ಹನುಮಂತ ಇಷ್ಟಪಟ್ಟು ಅನುಭವಿಸಿದ್ದು ಏನನ್ನು? | ಶ್ರೀರಾಮನ ಸೇವೆ | ೨೪ | |
| ೧೦ | ಶ್ರೀರಾಮ ಪರಂಧಾಮಕ್ಕೆ ಹೋಗುವಾಗ ಹನುಮಂತನಿಗೆ ಏನನ್ನು ಕೊಟ್ಟ? | ತನ್ನನ್ನೇಕೊಟ್ಟ | ೨೬ | |
| ೧೧ | ಈಗಲೂ ಹನುಮಂತ ರಾಮಕಥಾಕೀರ್ತನೆಯಲ್ಲಿ ಮುಳುಗಿರುವ ಸ್ಥಳ ಯಾವುದು? | ಕಿಂಪುರುಷ | ೨೭ | |
| ೧೨ | ವಾಯುದೇವರ ಮೊದಲ ಅವತಾರ ಹನುಮಂತನಾದರೆ ಎರಡನೇ ಅವತಾರ ಯಾವುದು? | ಭೀಮಸೇನ | ೨೮ | ಭೀಮಸೇನ ಚರಿತ್ರೆ |
| ೧೩ | ಭೀಮಸೇನ ಮಗುವಾಗಿದ್ದಾಗ ತಾಯಿಯಾದ ಕುಂತಿಯ ಕೈಯಿಂದ ಜಾರಿದಾಗ ಏನಾಯಿತು? | ಶತಶೃಂಗ ಪರ್ವತವೇ ಸೀಳಿತು | ೨೯ | |
| ೧೪ | ಸೌಗಂಧಿಕಾ ಪುಷ್ಪವನ್ನುತರುವ ಸಂದರ್ಭದಲ್ಲಿ ಭೀಮಸೇನಯಾರನ್ನು ಸಂಹರಿಸಿದ್ದು ? | ಮಣಿಮಂತನೆ ಮೊದಲಾದಕ್ರೋಧವಶರನ್ನು | ೩೯ | |
| ೧೫ | ಮಹಾಭಾರತಯುದ್ಧದಲ್ಲಿ ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳನ್ನು ಕೊಂದವ ಯಾರು? | ಭೀಮಸೇನ | ೪೨ | |
| ೧೬ | ಭೀಮನಿಂದ ಸತ್ತಿದ್ದ ಮಣಿಮಂತ ಕಲಿಯುಗದಲ್ಲಿಎಲ್ಲಿಹುಟ್ಟಿದ? | ಅಂಘ್ರಿತಲ (ಕಾಲಡಿ) | ೪೭ | ಹಿನ್ನೆಲೆ |
| ೧೭ | ಬೌದ್ಧಮತವು ಹೇಳಿದ್ದನ್ನೇ ಬೇರೆ ಶಬ್ದಗಳಿಂದ ಹೇಳಿದ ಪ್ರಚ್ಛನ್ನ ಬೌದ್ಧಮತಯಾವುದು? | ಮಾಯವಾದ ಮತ | ೫೧ | |

| | | | | |
|---|---|---|---|---|
| ೧೮ | ಜಗತ್ತುಸುಳ್ಳು,ಬ್ರಹ್ಮ ನಿರ್ಗುಣ ಎಂಬ ಮಾಯಾವಾದದ ಪ್ರಭಾವದಿಂದ ಲೋಕದ ಜನರಲ್ಲಿಏನಾಯಿತು ? | ಸಜ್ಜನರ ಮನಸ್ಸಿನಲ್ಲಿದ್ದ ದೇವರು ಮರೆಯಾದನು | ೫೫ | |
| | ಸರ್ಗ ೨ | | | |
| ೦೧ | ಕಲಿಯುಗದಲ್ಲಿ ಭಗವಂತನಿಗೆ ಅವತಾರವಿಲ್ಲದ ಕಾರಣ ಕಲಿಯುಗದ ರಕ್ಷಣೆಗಾಗಿ ನಾರಾಯಣ ಯಾರನ್ನುಅವತರಿಸಲು ಆದೇಶಿಸಿದ ? | ಸರ್ವಜ್ಞರಾದ ಮುಖ್ಯಪ್ರಾಣದೇವರನ್ನು | ೦೨ | ಮುಖ್ಯಪ್ರಾಣ ದೇವರ ૩ನೇಅವತಾರ |
| ೦೨ | ಅನಂತಾಸನದೇವರು ಒಬ್ಬ ಅಕುಶಲನಲ್ಲಿ ಪ್ರವೇಶಿಸಿ ಧ್ವಜಸ್ತಂಭದತುದಿಯಲ್ಲಿ ನಿಂತು ನೀಡಿದ ಸಂದೇಶವೇನು ? | ಮಹಾಪುರುಷರಅವತಾರವಾಗಲಿದೆ | ೦೮ | |
| ೦೩ | ಮುಖ್ಯಪ್ರಾಣದೇವರು ಅವತಾರ ತಾಳಲು ಯಾವ ಸತ್ಕುಲವನ್ನು ಆರಿಸಿದರು ? | ಮಧ್ಯಗೇಹ (ನಡಿಲ್ಲಾಯ) | ೦೯ | ಮಧ್ಯಗೇಹ ಭಟ್ಟರಸಾಧನೆ |
| ೦೪ | ವೇದಾದ್ರಿ ಮತ್ತುರಜತಪೀಠಪುರಾಧಿವಾಸಿಯಾದ ಅನಂತಾಸನ ಯಾವ ಗ್ರಾಮಕೆ ಅಲಂಕಾರಪ್ರಾಯರು ? | ಶಿವರೂಪ್ಯ (ಶಿವಳ್ಳಿ)ಗ್ರಾಮ | ೧೦ | |
| ೦೫ | ಮಧ್ಯಗೇಹಭಟ್ಟರ ಮೂಲ ಸ್ಥಳ ಯಾವುದು? | ಶಿವಳ್ಳಿ ಗ್ರಾಮ | ೧೦ | |
| ೦೬ | ಮಧ್ಯಗೇಹಭಟ್ಟರ ವಾಸ ಸ್ಥಳ ಯಾವುದು? | ಪಾಜಕಕ್ಷೇತ್ರ | ೧೧ | |
| ೦೭ | ಉಡುಪಿಯಲ್ಲಿಗೋವಿಂದನ ಕಥೆಗಳ ಮೂಲಕ ಜನರ ಮತ್ತು ದೇವತೆಗಳ ಕರ್ಣಗಳಿಗೆ ಆನಂದವನ್ನು ನೀಡುತ್ತಿದ್ದವರು ಯಾರು? | ಮಧ್ಯಗೇಹಭಟ್ಟರು | ೧೫ | |
| ೦೮ | ತತ್ವಜ್ಞಾನದ ನಿಧಿಯಾದ ಮಗನನ್ನು ಪಡೆಯಲು ಮಧ್ಯಗೇಹಭಟ್ಟರು ಯಾರನ್ನು ಶರಣು ಹೊಂದಿದರು ? | ನಾರಾಯಣ | ೧೮ | |
| ೦೯ | ಸತ್ಪುತ್ರಪ್ರಾಪ್ತಿಗಾಗಿ ರಜತಪೀಠಪುರಾಧಿವಾಸಿಯಾದ ಅನಂತಾಸನನ್ನು ಮಧ್ಯಗೇಹಭಟ್ಟರು ಎಷ್ಟು ವರ್ಷ ಆರಾಧಿಸಿದರು ? | ೧೨ ವರ್ಷ | ೧೯ | |
| ೧೦ | ಮಧ್ಯಗೇಹಭಟ್ಟದಂಪತಿಗಳು ಭಗವತ್ಪ್ರೀತಿಗಾಗಿ ಮಾಡಿದ ವ್ರತಗಳಾವುವು ? | ಪಯೋವ್ರತ ಮೊದಲಾದವು | ೨೧ | |
| ೧೧ | ಮುಖ್ಯಪ್ರಾಣದೇವರ ಅವತರಣವಾದ ಸ್ಥಳ ಯಾವುದು? | (ಉಡುಪಿ)ರಜತಪೀಠಪುರ | ೨೪ | ಮಧ್ವಾಚಾರ್ಯರ ಅವತಾರ |
| ೧೨ | ಮಧ್ವಾಚಾರ್ಯರ ಅವತಾರದಕಾಲದಲ್ಲಿ ಲೋಕದ ಮನುಷ್ಯರಿಗೆ ಕೇಳಿದ ಶಬ್ದ ಯಾವುದು? | ದೇವದುಂದುಬಿನಾದ | ೨೬ | |
| ೧೩ | ಮಧ್ವಾಚಾರ್ಯರಿಗೆ ನಾಮಕರಣದಲ್ಲಿತಂದೆ ನೀಡಿದ ಹೆಸರೇನು ? | ವಾಸುದೇವ | ೨೯ | ಮಧ್ವಾಚಾರ್ಯರ ಬಾಲ್ಯ |
| ೧೪ | ವಾಸುದೇವನಿಗೆ ಹಾಲು ಕುಡಿಯಲು ಅನುಕೂಲವಾಗಲೆಂದು ಗೋದಾನ ಮಾಡಿದ ಸಾಧಕರು ಯಾರು? | ಪೂರ್ವಾಲಯ (ಮೂಡಿಲ್ಲಾಯರು) | ೩೦ | |
| ೧೫ | ತಮ್ಮ ಸ್ವಾಮಿಯಾದ ಉಡುಪಿಯ ಅನಂತಾಸನನಿಗೆ ಮಧ್ಯಗೇಹಭಟ್ಟರು ಉಡುಗೊರೆಯಾಗಿ ಏನನ್ನು ನೀಡಿದರು ? | ಪುತ್ರರತ್ನ(ಮಗನನ್ನು) | ೩೧ | |
| ೧೬ | ರಾತ್ರಿಯ ಸಂಚಾರದಲ್ಲಿ ಪಿಶಾಚಬಾಧೆಯಿಂದ ಒಬ್ಬರಕ್ತಕಾರಿದಾಗ ಅಲ್ಲಿದ್ದವರಿಗೆ ಆದ ಆಶ್ಚರ್ಯವೇನು? | ಈ ಚಿಕ್ಕ ಮಗು ವಾಸುದೇವನಿಗೆ ಏನು ಆಗಲಿಲ್ಲ | ೩೩ | |
| ೧೭ | ಮನೆಯಲ್ಲಿಯಾರೂ ಇಲ್ಲದಿದ್ದಾಗ ವಾಸುದೇವನನ್ನು ಅವನ ಸಹೋದರಿಯನ್ನು ಸಮಾಧಾನಪಡಿಸಿದ್ದು ಹೇಗೆ ? | ಬೇಯಿಸಿದ ಹುರುಳಿಯನ್ನು ತಿನ್ನಿಸಿ | ೩೮ | |
| ೧೮ | ದೊಡ್ಡವರಿಗೂ ಜೀರ್ಣಿಸಿಕೊಳ್ಳಲು ಕಷ್ಟವಾಗುವ ಹುರುಳಿಯನ್ನು ತಿಂದ ಮಗು ವಾಸುದೇವನಿಗಿ ಏನಾಯಿತು? | ಏನೂ ಆಗಲಿಲ್ಲ, ಆರೋಗ್ಯವಾಗಿದ್ದ | ೪೧ | |
| ೧೯ | ಎತ್ತಿನ ಬಾಲವನ್ನು ಹಿಡಿದು ಮನೆಯಿಂದ ಹೊರಗೆ ಹೋಗಿ ಮನೆಯವರಿಗೆಲ್ಲ ಗಲಿಬಿಲಿಯಾದ ಘಟನೆ ನಡೆದಾಗ ವಾಸುದೇವನಿಗೆ ಎಷ್ಟು ವರ್ಷ ? | ಒಂದು ವರ್ಷ | ೪೮ | |
| ೨೦ | ಮಧ್ಯಗೇಹಭಟ್ಟರು ಯಾರಿಂದ ಸಾಲವನ್ನು ಪಡೆದಿದ್ದರು ? | ಎತ್ತನ್ನು ಮಾರಿದ್ದ ಶ್ರೀಮಂತನಿಂದ | ೫೦ | |
| ೨೧ | ತಂದೆ ಮಾಡಿದ್ದ ಸಾಲವನ್ನು ತೀರಿಸಲು ವಾಸುದೇವ ಏನನ್ನು ನೀಡಿದ ? | ಹುಣಸೆ ಬೀಜ | ೫೧ | |

| ಸರ್ಗ ೩ | | | | |
|---|---|---|---|---|
| ೦೧ | ಬಂಧುಗಳ ಸಡಗರದ ಮಧ್ಯದಲ್ಲಿತಾಯಿ ತನ್ನನ್ನು ಗಮನಿಸುತ್ತಿಲ್ಲಎಂದು ತಿಳಿದು ವಾಸುದೇವ ಮನೆಯಿಂದ ಹೊರಟಘಟನೆ ನಡೆದದ್ದುಎಲ್ಲಿ ? | ನಡುವ್ಯೆರಿ(ನಿಡಿಯೂರು) | ೦೨ | ಬಾಲ್ಯಲೀಲೆ |
| ೦೨ | ಚಿಕ್ಕ ಹುಡುಗ ವಾಸುದೇವದಾರಿಯಲ್ಲಿಒಬ್ಬಂಟಿಯಾಗಿ ಹೋಗುತ್ತಿದ್ದಾಗ ದಾರಿಹೋಕರ ಪ್ರಶ್ನೆಗೆ ವಾಸುದೇವನಉತ್ತರ ಏನಿತ್ತು? | ಮಂದಹಾಸ | ೦೩ | |
| ೦೩ | ಕೊಡವೂರಿನ ನಾರಾಯಣನಿಗೆ ನಮಸ್ಕರಿಸಿದ ವಾಸುದೇವ ನಂತರ ಎಲ್ಲಿಗೆ ಹೋದ ? | ತಾಳಿಕೊಡೆಯ ದೇವಾಲಯ | ೦೪ | |
| ೦೪ | ಅಶ್ವಮೇಧಕ್ಕೂ ಮಿಗಿಲಾದ ಫಲ ಯಾವುದರಿಂದ ಸಿಗುತ್ತದೆ ? | ಹರಿ ನಮಸ್ಕಾರ | ೦೬ | |
| ೦೫ | ಕೊಡವೂರು – ತಾಳಿಕೊಡೆಯ ದೇವಾಲಯದಿಂದ ಹೊರಟ ವಾಸುದೇವ ನಂತರ ಎಲ್ಲಿಗೆ ಹೋಗಿ ನಮಸ್ಕರಿಸಿದ ? | ಪೂರ್ವಾಲಯ (ಚಂದ್ರಮೌಳೀಶ್ವರ ದೇವಾಲಯ) | ೧೩ | |
| ೦೬ | ಕೊಡವೂರಿಗೆ ಹೇಗೆ ಬಂದೆ ಎಂಬ ತಂದೆಯ ಪ್ರಶ್ನೆಗೆ ವಾಸುದೇವನ ಉತ್ತರ ಏನಿತ್ತು? | ಸ್ನೇಹಿತನಾದ ಹರಿಜೊತೆಗಿದ್ದ | ೧೩ | |
| ೦೭ | ಚಂದ್ರಮೌಳೀಶ್ವರ ದೇವಾಲಯದಲ್ಲಿ ನಮಸ್ಕರಿಸಿದ ವಾಸುದೇವ ನಂತರ ಹೋದದ್ದುಎಲ್ಲಿಗೆ ? | ಪಶ್ಚಿಮಾಲಯ (ಅನಂತಾಸನದೇವಾಲಯ) | ೧೪ | |
| ೦೮ | ವಿಮಾನಗಿರಿಯಲ್ಲಿ ಹೆಚ್ಚು ಕಾಲ ಇರುತ್ತಿದ್ದ ವಾಸುದೇವ ಯಾರ ರಕ್ಷಣೆಯಲ್ಲಿದ್ದ ? | ದುರ್ಗಾದೇವಿ | ೧೭ | |
| ೦೯ | ವಾಸುದೇವನಿಗೆ ಅಕ್ಷರಭ್ಯಾಸದ ಪಾಠವಾಗುತ್ತಿದ್ದಾಗ ಏನು ಹೇಳುತ್ತಿದ್ದ ? | ಬರೆಸಿದ್ದನ್ನೇ ಮತ್ತೆ ಏಕೆ ಬರೆಸುವಿರಿ | ೧೯ | ವಾಸುದೇವನ ಪ್ರತಿಭೆ |
| ೧೦ | ವಾಸುದೇವನ ಪ್ರತಿಭೆಗೆ ಜನರದೃಷ್ಟಿದೋಷ ತಟ್ಟದಿರಲಿ ಎಂದು ಮಧ್ಯಗೇಹಭಟ್ಟರು ಏನು ಮಾಡುತ್ತಿದ್ದರು ? | ಏಕಾಂತದಲ್ಲಿ ಪಾಠ ಮಾಡುತ್ತಿದ್ದರು | ೨೦ | |
| ೧೧ | ಯಾರು ಹೇಳುತ್ತಿದ್ದ ಪುರಾಣದಕಥೆಯನ್ನು ತಪ್ಪುಎಂದು ವಾಸುದೇವ ವಿರೋಧಿಸಿದ್ದ ? | ಶಿವ ಮಡಿನಾಯ | ೨೨ | |
| ೧೨ | ಶಿವ ಭಟ್ಟನು ಹೇಳಿದ ಪುರಾಣದ ಕಥೆಗಳನ್ನು ತಿದ್ದಿ ಸರಿಯಾದಕಥೆಯನ್ನು ವಾಸುದೇವ ಹೇಳಿದ ಘಟನೆ ನಡೆದದ್ದುಎಲ್ಲಿ? | ಘೃತವಲ್ಲೀ(ನೇಯಂಪಳ್ಳಿ) | ೨೧ | |
| ೧೩ | ಮಧ್ಯಗೇಹಭಟ್ಟರು ಮಗನ ಅದ್ಭುತವಾದ ಸಹಜ ಪ್ರತಿಭೆಗೆ ಕಾರಣಏನೆಂದು ತಿಳಿದಿದ್ದರು ? | ಅನಂತಾಸನನದಯೆ | ೨೭ | |
| ೧೪ | ಮಧ್ಯಗೇಹಭಟ್ಟರು ಪ್ರವಚನ ಮಾಡುವಾಗಯಾವ ಶಬ್ದದ ಅರ್ಥವನ್ನು ಹೇಳಿರಲಿಲ್ಲ ? | ಲಿಕುಚ | ೨೯ | |
| ೧೫ | ಉಪನಯನಕಾಲದಲ್ಲಿ ಮಧ್ಯಗೇಹಭಟ್ಟರು ಮಗನಿಗೆ ಮಾಡಿದ ಉಪದೇಶವೇನು? | ಸದಾಚಾರಿಯಾಗಿ ಶಾಸ್ತ್ರಅಧ್ಯಯನ, ಅಗ್ನಿ ಮತ್ತು ಗುರುಗಳ ಶುಶ್ರೂಷೆ | ೩೫ | |
| ೧೬ | ವಾಸುದೇವನ ಕೋಮಲವಾದ ಕಾಲಿನ ಬೆರಳಿನ ತುಳಿತಕ್ಕೆ ಸಿಲುಕಿ ಸತ್ತವ ಯಾರು? | ಸರ್ಪರೂಪದ ಅಸುರ | ೩೮ | |
| ೧೭ | ವಾಸುದೇವನ ಗುರುಗಳ ವಂಶನಾಮವೇನು? | ಪೂಗವನ (ತೋಟಂತಿಲ್ಲಾಯ) | ೪೯ | ಗುರುಕುಲವಾಸ |
| ೧೮ | ಗುರುಗಳು ಕೋಪದಿಂದ ಸರಿಯಾಗಿ ಓದುತ್ತಿಲ್ಲ ಎಂದು ಗದರಿಸಿದಾಗ ವಾಸುದೇವ ಏನು ಮಾಡಿದ ? | ಸ್ವಲ್ಪವೂ ತಪ್ಪಿಲ್ಲದೇ ವೇದಮಂತ್ರವನ್ನು ಹೇಳಿ ಗುರುಗಳನ್ನೇ ಆಶ್ಚರ್ಯಚಕಿತರನ್ನಾಗಿಸಿದ | ೫೨ | |

| | | | | |
|---|---|---|---|---|
| ೧೯ | ವಾಸುದೇವ ಯಾರ ಕಿವಿಯನ್ನು ಊದಿ ಸಹಿಸಲಸಾಧ್ಯವಾದ ತಲೆನೋವನ್ನು ಪರಿಹರಿಸಿದ ? | ಗುರುಪುತ್ರ | ೫೩ | |
| ೨೦ | ವಾಸುದೇವ ಗುರುಗಳಿಗೆ ನೀಡಿದದಕ್ಷಿಣೆ ಏನು ? | ಐತರೇಯೋಪನಿಷತ್ತಿನ ಪಾಠ | ೫೫ | |
| | | **ಸರ್ಗ ೪** | | |
| ೦೧ | ತಮ್ಮಲ್ಲಿರುವ ಯಾವಗುಣವನ್ನು ಪ್ರಕಟಿಸಲು ಮಧ್ವಾಚಾರ್ಯರು ಸನ್ಯಾಸದ ನಿರ್ಧಾರಮಾಡಿದರು ? | ಅಸಂಗ | ೦೨ | ಮಧ್ವಾಚಾರ್ಯರ ಸನ್ಯಾಸ ನಿರ್ಧಾರ |
| ೦೨ | ದುಷ್ಟರನ್ನು ಶಿಕ್ಷಿಸುವ ಸಾಮರ್ಥ್ಯ, ಯೋಗ್ಯತೆ ಎಲ್ಲಾಇದ್ದರೂ ಅದಕ್ಕೆ ಅವಕಾಶವಿಲ್ಲದ ಸನ್ಯಾಸವನ್ನು ಸ್ವೀಕರಿಸಿದ್ದು ಏಕೆ? | ಆ ಕೆಲಸವನ್ನು ದುರ್ಗಾದೇವಿ ಮಾಡುತ್ತಾಳೆ ಎಂದು | ೦೩ | |
| ೦೩ | ಜಗದ್ಗುರುಗಳಾದ ಮಧ್ವಾಚಾರ್ಯರು ಗುರುಗಳನ್ನು ಅನ್ವೇಷಿಸಿದ ಹಿನ್ನಲೆ ಏನು? | ಗುರುಗಳ ಅನ್ವೇಷಣೆ ಮುಖ್ಯಕರ್ತವ್ಯಎಂದು ಲೋಕಕ್ಕೆ ತಿಳಿಸಲು | ೦೫ | |
| ೦೪ | ಅಚ್ಯುತಪ್ರೇಕ್ಷರಲ್ಲಿದ್ದ ನಿರ್ಮಲವಾದ ಅಂತಕರಣಶುದ್ಧಿಗೆ ಕಾರಣವೇನು? | ದ್ರೌಪದಿ ಮಾಡಿದ ಪರಿಶುದ್ಧವಾದ ಅನ್ನವನ್ನು ಉಂಡದ್ದು | ೦೭ | ಅಚ್ಯುತಪ್ರೇಕ್ಷಾ ಚಾರ್ಯರು |
| ೦೫ | ದುಷ್ಟ ಶಾಸ್ತ್ರಗಳ ಅಧ್ಯಯನ ಮಾಡಿದ್ದರೂ ಅಚ್ಯುತಪ್ರೇಕ್ಷಾಚಾರ್ಯರಿಗೆ ಅದು ಪ್ರತಿಬಂಧಕವಾಗಲಿಲ್ಲ ಏಕೆ? | ಪಶ್ಚಾತಾಪ ಪಟ್ಟಿದ್ದರಿಂದ | ೦೮ | |
| ೦೬ | ಅಚ್ಯುತಪ್ರೇಕ್ಷಾಚಾರ್ಯರಿಗೆ ಗುರುಗಳು ಕೊನೆಯಕಾಲದಲ್ಲಿ ನೀಡಿದ ಉಪದೇಶವೇನು? | ಮಾಯಾವಾದವನ್ನು ನಂಬಬೇಡ | ೧೦ | |
| ೦೭ | ತತ್ವಜ್ಞಾನಕ್ಕಾಗಿ ನಾರಾಯಣನನ್ನು ಆರಾಧಿಸು ಎಂಬ ಗುರುಗಳ ಆದೇಶದಂತೆ ಆರಾಧನೆಗಾಗಿ ಅಚ್ಯುತಪ್ರೇಕ್ಷಾಚಾರ್ಯರು ಆರಿಸಿಕೊಂಡ ಸ್ಥಳ ಯಾವುದು? | ಉಡುಪಿಯ ಅನಂತಾಸನದೇವಾಲಯ | ೧೨ | |
| ೦೮ | ಅಚ್ಯುತಪ್ರೇಕ್ಷಾಚಾರ್ಯರ ಆರಾಧನೆಗೆ ಪ್ರೀತರಾಗಿ ಅನಂತಾಸನದೇವರು ತಮ್ಮಅನುಗ್ರಹವನ್ನು ತಿಳಿಸಿದ ಬಗೆ ಹೇಗೆ? | ಒಬ್ಬ ವ್ಯಕ್ತಿಯಲ್ಲಿ ಪ್ರವೇಶಿಸಿ ಶ್ರೇಷ್ಠಶಿಷ್ಯನಿಂದ ತತ್ವಜ್ಞಾನವನ್ನು ಪಡೆಎಂದದ್ದು | ೧೩ | |
| ೦೯ | ಮಧ್ವಾಚಾರ್ಯರ ಸನ್ಯಾಸ ನಿರ್ಧಾರದ ವಿಷಯ ತಿಳಿದಾಗ ದುಃಖದಿಂದ ನಮ್ಮನ್ನು ಅನಾಥರನ್ನಾಗಿ ಮಾಡಬೇಡ ಎಂದದ್ದುಯಾರು? | ಮಧ್ಯಗೇಹದಂಪತಿಗಳು | ೧೬ | ಮಧ್ವಾಚಾರ್ಯರ ಸನ್ಯಾಸ |
| ೧೦ | ಮಧ್ವಾಚಾರ್ಯರ ಸನ್ಯಾಸಆಶ್ರಮಕ್ಕೆ ದೈವವೇ ತಂದೆ ತಾಯಿಗಳ ಮೂಲಕ ಒಪ್ಪಿಗೆ ಸೂಚಿಸಿದ್ದು ಹೇಗೆ ? | ತಂದೆ ತಾಯಿಗಳು ಮಗನಿಗೆ ನಮಸ್ಕರಿಸಿದಾಗ | ೧೭ | |
| ೧೧ | ನೇತ್ರಾವತಿ ಸಮೀಪದ ಕಾರ್ಯೂರಿನಕುತ್ಯಾಡಿ ಮಠದಲ್ಲಿದ್ದ ಮಧ್ವಾಚಾರ್ಯರ ಬಳಿ ಯಾರು ಬಂದರು ? | ಮಧ್ಯಗೇಹಭಟ್ಟರು | ೧೯ | |
| ೧೨ | ಮಧ್ವಾಚಾರ್ಯರು ಸನ್ಯಾಸ ಸ್ವೀಕಾರದ ನಿರ್ಧಾರವನ್ನು ಬದಲಿಸದಿದ್ದಾಗ ಮಧ್ಯಗೇಹಭಟ್ಟರು ಯಾವ ಬೆದರಿಕೆಯನ್ನು ನೀಡಿದರು? | ಪ್ರಾಣತ್ಯಾಗದ ಬೆದರಿಕೆ | ೨೦ | |
| ೧೩ | ಮಧ್ವಾಚಾರ್ಯರ ಪ್ರಕಾರ ಸನ್ಯಾಸಕ್ಕೆ ಸೂಕ್ತವಾದ ಕಾಲ ಯಾವುದು? | ಪಕ್ವವಾದ ವೈರಾಗ್ಯ ಬಂದಾಗ | ೨೩ | |
| ೧೪ | ಮಧ್ಯಗೇಹಭಟ್ಟರಿಗೆ ಮತ್ತೊಬ್ಬ ಮಗ ಹುಟ್ಟಿದ್ದು ಮಧ್ವಾಚಾರ್ಯರಿಗೆ ಹೇಗೆ ಅನುಕೂಲವಾಯಿತು ? | ಸನ್ಯಾಸ ಸ್ವೀಕರಿಸಲು | ೨೭ | |
| ೧೫ | ಸನ್ಯಾಸ ಸ್ವೀಕರಿಸಿದ ಮಧ್ವಾಚಾರ್ಯರ ಯಾವ ಮಂತ್ರದಜಪಕ್ಕೆ ತಾವು ಮುಖ್ಯಾಧಿಕಾರಿ ಎಂದು ಸೂಚಿಸಿದರು ? | ಪ್ರಣವ ಮಂತ್ರ | ೩೨ | |
| ೧೬ | ಮಧ್ವಾಚಾರ್ಯರು ಸನ್ಯಾಸ ಸ್ವೀಕರಿಸಿದಾಗ ಬಂದ ನಾಮ ಯಾವುದು? | ಪೂರ್ಣಪ್ರಜ್ಞ | ೩೩ | |
| ೧೭ | ಶೇಷ, ರುದ್ರ, ಗರುಡಾದಿಗಳಿಂದಲೂ ನಮಸ್ಕಾರವನ್ನು ಸ್ವೀಕರಿಸುವ ಮಧ್ವಾಚಾರ್ಯರ ಯಾರಿಗೆ ನಮಸ್ಕರಿಸಿದರು ?(ಏಕೆ?) | ಗುರುಗಳಿಗೆ (ವಿಡಂಬನೆ) | ೩೫ | |

| | | | | |
|---|---|---|---|---|
| ೧೮ | ಯಾರನ್ನು ತೋರಿಸಿ ಇವನೇ ನಿಮ್ಮ ತಪಸ್ಸಿನ ಫಲ ಎಂದು ಅನಂತಾಸನದೇವರು ಅಚ್ಯುತಪ್ರೇಕ್ಷರಿಗೆ ಹೇಳಿದ್ದು ? | ಪೂರ್ಣಪ್ರಜ್ಞರನ್ನು | ೩೮ | |
| ೧೯ | ವಿಷಯಸಂಗ ಪರಿತ್ಯಾಗಕ್ಕೆ ಅಲಂಕಾರವಾದದ್ದುಯಾವುದು? | ಸಜ್ಜನರ ಸಂಗ | ೩೯ | |
| ೨೦ | ಮಧ್ವಾಚಾರ್ಯರಿಗೆ ಗಂಗಾಸ್ನಾನದ ಬಯಕೆ, ಗುರುಗಳಿಗೆ ಶಿಷ್ಯವಿರಹ ವೇದನೆ ಈ ಸಂದರ್ಭದಲ್ಲಿಆಚಾರ್ಯರಿಗೆ ಭಗವಂತ ನೀಡಿದ ಸಂದೇಶವೇನು? | ಇನ್ನು ಮೂರು ದಿನದಲ್ಲಿಗಂಗೆಯೇಇಲ್ಲಿಗೆ ಬರುವಳು | ೪೧ | ಗುರುಶಿಷ್ಯರು |
| ೨೧ | ಈಗಲೂ ಹನ್ನೆರಡು ವರ್ಷಕ್ಕೊಮ್ಮೆ ಉಡುಪಿಯ ಸರೋವರಕ್ಕೆ ಗಂಗಾದೇವಿಯು ಬರುವುದು ಏತಕ್ಕಾಗಿ? | ಮಧ್ವಾಚಾರ್ಯರ ವೈಶಿಷ್ಟ್ಯವನ್ನು ಜಗತ್ತಿಗೆ ತಿಳಿಸಲು | ೪೨ | |
| ೨೨ | ಮಧ್ವಾಚಾರ್ಯರು ಸನ್ಯಾಸ ಸ್ವೀಕರಿಸಿ ೪೦ ದಿನ ಕಳೆಯಲು ಯಾರ ಜೊತೆ ವಾದಮಾಡಿದರು? | ವಾಸುದೇವ | ೪೩ | |
| ೨೩ | ಮಧ್ವಾಚಾರ್ಯರು ಗುರುಗಳ ಬಯಕೆಯಂತೆ ಯಾವ ಅದ್ವೈತಗ್ರಂಥವನ್ನು ಪಾಠ ಕೇಳಿದರು ? | ಇಷ್ಟಸಿದ್ಧಿ | ೪೪ | |
| ೨೪ | ಇಷ್ಟಸಿದ್ಧಿ ಗ್ರಂಥದ ಮೊದಲ ಪದ್ಯದಲ್ಲಿ ಮಧ್ವಾಚಾರ್ಯರು ಎಷ್ಟು ದೋಷಗಳನ್ನು ತೋರಿಸಿದರು ? | ೩೨ | ೪೫ | |
| ೨೫ | ಅಚ್ಯುತ ಪ್ರೇಕ್ಷಾಚಾರ್ಯರು ಮಾಡುತ್ತಿದ್ದ ಭಾಗವತದ ಪಾಠದಲ್ಲಿ ಅನೇಕ ಬಗೆಯ ಪಾಠ ಭೇದವಿರುವ ಪುಸ್ತಕಗಳಿದ್ದಾಗ ಶುದ್ಧವಾದ ಪಾಠವನ್ನು ನಿರ್ಣಯಿಸಿದವರು ಯಾರು? | ಮಧ್ವಾಚಾರ್ಯರು | ೪೯ | |
| ೨೬ | ಭಾಗವತದ ಪರೀಕ್ಷೆಯಲ್ಲಿ ಮಧ್ವಾಚಾರ್ಯರು ಯಾವ ಭಾಗವನ್ನು ಹೇಳಿದರು ? | ಪಂಚಮಸ್ಕಂದಗದ್ಯಭಾಗ | ೫೧ | |
| ೨೭ | ಪಾಠವೇ ಆಗದ ಭಾಗವತವನ್ನು ಅಷ್ಟು ಸುಂದರವಾಗಿ ಹೇಗೆ ಹೇಳಿದಿರಿ ಎಂಬ ಅಚ್ಯುತಪ್ರೇಕ್ಷಾಚಾರ್ಯರ ಪ್ರಶ್ನೆಗೆ ಮಧ್ವಾಚಾರ್ಯರ ಉತ್ತರವೇನಿತ್ತು ? | ಹಿಂದಿನ ಜನ್ಮದಲ್ಲಿಯೇ ಇದನ್ನು ತಿಳಿದಿರುವೆ | ೫೩ | |
| | **ಸರ್ಗ ೫** | | | |
| ೦೧ | ಮಧ್ವಾಚಾರ್ಯರಿಗೆ ವೇದಾಂತಪೀಠದಲ್ಲಿ ಪಟ್ಟಾಭಿಷೇಕವಾದಾಗ ಬಂದ ಹೆಸರೇನು ? | ಆನಂದತೀರ್ಥ | ೦೨ | ಪಟ್ಟಾಭಿಷೇಕ |
| ೦೨ | ವಾಕ್ಯಾರ್ಥ ಸಭೆಯಲ್ಲಿ ವಿದ್ವಾಂಸರ ಅನುಮಾನಗಳನ್ನು ಖಂಡಿಸಿ ತಾರ್ಕಿಕರನ್ನು ಗೆದ್ದ ಮಧ್ವಾಚಾರ್ಯರಿಗೆ ಬಂದ ಹೆಸರೇನು? | ಅನುಮಾನತೀರ್ಥ | ೦೭ | ವಾದಕೌಶಲ |
| ೦೩ | ಉಡುಪಿಗೆ ವಾದ ಮಾಡಲು ಬಂದ ಬೌದ್ಧ ವಿದ್ವಾಂಸರು ಯಾರು? | ವಾದಿಸಿಂಹ, ಬುದ್ಧಿಸಾಗರ | ೦೮ | |
| ೦೪ | ಮಧ್ವಾಚಾರ್ಯರನ್ನು ಸೋಲಿಸಲು ಪ್ರಯತ್ನಿಸಿದ ವಾದಿಸಿಂಹ ಎಷ್ಟು ಬಗೆಯ ವಿಕಲ್ಪಗಳನ್ನು ಮಾಡಿದನು ? | ೧೮ | ೧೨ | |
| ೦೫ | ಆಚಾರ್ಯರನ್ನು ಎದುರಿಸಲಾಗದೆ'ನಾಳೆ ವಾದವನ್ನು ಮುಂದುವರಿಸೋಣ' ಎಂದ ವಾದಿಸಿಂಹ ಮತ್ತು ಬುದ್ಧಿಸಾಗರ ಏನು ಮಾಡಿದರು ? | ರಾತ್ರಿಊರು ಬಿಟ್ಟು ಓಡಿ ಹೋದರು | ೧೫ | |
| ೦೬ | ವಿದ್ವತ್ ಸಭೆಯಲ್ಲಿ ಮಧ್ವಾಚಾರ್ಯರು ಮಣಿಮಂತ ಬರೆದ ಭಾಷ್ಯದಲ್ಲಿ ಮಾಡಿದ ಆಕ್ಷೇಪ ಏನು ? | ಸೂತ್ರಕ್ಕೂ ಭಾಷಕ್ಕೂ ಹೊಂದಾಣಿಕೆಇಲ್ಲ | ೧೮ | |
| ೦೭ | ಮಧ್ವಾಚಾರ್ಯರ ವಿದ್ವತ್ತು, ದಿಗ್ವಿಜಯದಿಂದ ಬೇಸರವನ್ನೆಲ್ಲ ಮರೆತು ಪ್ರಸನ್ನರಾಗಿ ಅವರ ಪಾಠ ಪ್ರವಚನವನ್ನು ಕೇಳಿ ಆನಂದಿಸಿದ ಮಹಾನುಭಾವರು ಯಾರು ? | ಮಧ್ಯಗೇಹಭಟ್ಟರು | ೨೪ | |
| ೦೮ | ಮಧ್ವಾಚಾರ್ಯರಿಗೆ ಬ್ರಹ್ಮಸೂತ್ರಭಾಷ್ಯಯನ್ನುರಚಿಸಬೇಕೆಂದು ಪ್ರಾರ್ಥಿಸಿಕೊಂಡವರು ಯಾರು? | ಲಿಕುಚಕುಲದ ಜೇಷ್ಠಯತಿಗಳು | ೨೭ | |

| | | | | |
|---|---|---|---|---|
| ೦೯ | ಮಧ್ವಾಚಾರ್ಯರು ಪೀಠಾಧಿಪತಿಗಳಾದ ನಂತರ ಮಧ್ವವಿಜಯದಲ್ಲಿ ಮೊದಲ ಸಂಚಾರ ಎಲ್ಲಿಗೆ? | ವಿಷ್ಣುಮಂಗಲ | ೩೦ | ದಕ್ಷಿಣಭಾರತ ಸಂಚಾರ |
| ೧೦ | ಭೋಜನದ ಬಳಿಕ ೨೦೦ ಬಾಳೆಹಣ್ಣುಗಳನ್ನು ತಿಂದು ಜೀರ್ಣಿಸಿಕೊಂಡ ಮಧ್ವಾಚಾರ್ಯರ ಸಾಮರ್ಥ್ಯವನ್ನು ಅಚ್ಯುತಪ್ರೇಕ್ಷರು ಪ್ರಶ್ನಿಸಿದಾಗ ಮಧ್ವಾಚಾರ್ಯರುಏನೆಂದರು ? | ಹೆಬ್ಬೆರಳಿನ ಗಾತ್ರದ ಜಠರಾಗ್ನಿ ಇರುವುದರಿಂದ ಜೀರ್ಣವಾಗುತ್ತದೆ | ೩೩ | |
| ೧೧ | ಪಯಸ್ವಿನೀ ನದಿಯತೀರದಲ್ಲಿ ಮಧ್ವಾಚಾರ್ಯರುಯಾರನ್ನು ಸ್ಮರಿಸಿಕೊಂಡರು ? | ಮುಂದೆ ಅವತಾರ ತಾಳುವ ದುರ್ಗಾದೇವಿಯನ್ನು | ೩೫ | |
| ೧೨ | ತಿರುವನಂತಪುರದ ಅನಂತಪದ್ಮನಾಭದೇವಾಲಯದಲ್ಲಿ ಮಧ್ವಾಚಾರ್ಯರು ಶಿಷ್ಯರಿಗೆ ಯಾವ ಪಾಠಮಾಡಿದರು? | ಬ್ರಹ್ಮಸೂತ್ರ | ೩೭ | |
| ೧೩ | ಅಸೂಯೆಯಿಂದ ಸಂಕರ ಮತ್ತೊಮ್ಮೆ ಯಾವ ವಂಶದಲ್ಲಿಹುಟ್ಟಿದ್ದ? | ಕುದುಪುಸ್ತೂರು | ೩೮ | |
| ೧೪ | ಕುದುಪುಸ್ತೂರು ಮಧ್ವಾಚಾರ್ಯರ ಮೇಲೆ ಮಾಡಿದ ಆಕ್ಷೇಪವೇನು? | ಭಾಷ್ಯ ಬರೆಯದವರು ಬ್ರಹ್ಮಸೂತ್ರದಅರ್ಥವನ್ನು ಹೇಳಬಾರದು | ೩೮ | |
| ೧೫ | ಮಧ್ವಾಚಾರ್ಯರು ಕುದುಪುಸ್ತೂರಿನ ದೇಹದ ಅವಲಕ್ಷಣವನ್ನು ತಿಳಿಸಿದಾಗ ಅವನು ಮಾಡಿದ ಪ್ರತಿಜ್ಞೆ ಏನು? | ಆಚಾರ್ಯರ ದಂಡವನ್ನು ಮುರಿಯುತ್ತೇನೆ | ೪೧ | |
| ೧೬ | ಕನ್ಯಾಕುಮಾರಿಗೆ ಹೋದ ಮಧ್ವಾಚಾರ್ಯರು ಸ್ನಾನ ಮಾಡಿದ್ದುಎಲ್ಲಿ ? | ಕನ್ಯಕಾತೀರ್ಥ | ೪೨ | |
| ೧೭ | ಯತಿವೇಷದ ಕುದುಪುಸ್ತೂರು ಮಧ್ವಾಚಾರ್ಯರ ದಂಡವನ್ನು ಮುರಿಯಲು ಬ್ರಾಹ್ಮಣ ಮುಖಂಡರ ಸಹಾಯ ಕೇಳಿದಾಗ ಅವನನ್ನು ತಿರಸ್ಕರಿಸಿದ ಬ್ರಾಹ್ಮಣರು ಏನೆಂದರು? | ಜ್ಞಾನಿಗಳನ್ನು ದ್ವೇಷಿಸುವುದು ಸರಿಯಲ್ಲ | ೪೪ | |
| ೧೮ | ರಾಮೇಶ್ವರದಲ್ಲಿ ಮಧ್ವಾಚಾರ್ಯರು ಯಾರ ಜೊತೆ ಚಾತುರ್ಮಾಸ್ಯವ್ರತಕೈಗೊಂಡರು? | ಗುರುಗಳ ಜೊತೆ | ೪೬ | |
| ೧೯ | ರಾಮೇಶ್ವರದಿಂದ ಮಧ್ವಾಚಾರ್ಯರು ಎಲ್ಲಿಗೆ ಹೋದರು ? | ಶ್ರೀರಂಗಂ | ೪೭ | |
| **ಸರ್ಗ ೬** | | | | |
| ೦೧ | ಐತರೇಯ ಸೂಕ್ತವನ್ನು ಮಧ್ವಾಚಾರ್ಯರು ವ್ಯಾಖ್ಯಾನಿಸಿದಾಗ ಅದನ್ನು ನಿರಾಕರಿಸಲು ವೇದ ವಿದ್ವಾಂಸರು ಬೇರೆ ಅರ್ಥದಲ್ಲಿ ಆ ಸೂಕ್ತವನ್ನು ವ್ಯಾಖ್ಯಾನಿಸಿದಾಗ ಮಧ್ವಾಚಾರ್ಯರು ಏನು ಮಾಡಿದರು ? | ಆ ಅರ್ಥವೂ ಸರಿ(ಏಕೆಂದರೆ ವೇದಕ್ಕೆ ಕನಿಷ್ಠ ಮೂರು ಅರ್ಥಗಳು)ಎಂದರು | ೦೪ | ಮಧ್ವಾಚಾರ್ಯರ ವಾಕ್ಯಾರ್ಥ ಶಕ್ತಿ |
| ೦೨ | ವೇದಗಳಿಗೆ ಮೂರು ಅರ್ಥಗಳಿದ್ದರೆ ಮಹಾಭಾರತಕ್ಕೆ ಎಷ್ಟು ಅರ್ಥ? | ೧೦ | ೦೪ | |
| ೦೩ | ವಿಷ್ಣು ಸಹಸ್ರನಾಮಕ್ಕೆ ೧೦೦ ಅರ್ಥ ಹೇಳಿ ಎಂದು ಸವಾಲೆಸೆದ ಬ್ರಾಹ್ಮಣರಿಗೆ ಮಧ್ವಾಚಾರ್ಯರ ಸವಾಲೇನು ? | ತಮ್ಮ ವ್ಯಾಖ್ಯಾನವನ್ನು ಅರ್ಥೈಸಿಕೊಂಡು ಅನುವಾದ ಮಾಡಬೇಕು | ೦೬ | |
| ೦೪ | ಕೇರಳದ ಪಯಸ್ವಿನೀ ನದಿಯತೀರದಲ್ಲಿ ನಡೆದ ವಾಕ್ಯಾರ್ಥದ ವಿಷಯ ಏನು ? | ದಾನ ಸೂಕ್ತ | ೧೩ | |
| ೦೫ | ಮಧ್ವಾಚಾರ್ಯರ ಪ್ರಕಾರ ದಾನಸೂಕ್ತದ ಪೃಣೀಯಾತ್ ಎನ್ನುವುದು ಯಾವಧಾತು? | ಪೃಣ್‌ದಾನೇ | ೧೪ | |
| ೦೬ | ಅಪಾಲಾ ಶಬ್ದಕ್ಕೆ ಮಧ್ವಾಚಾರ್ಯರು ಹೇಳಿದ ಅರ್ಥ ಏನು ? | ಅತಿತರುಣಿ | ೧೭ | |
| ೦೭ | ಅಪಾಲಾಶಬ್ದಕ್ಕೆ ಶ್ವೇತ ಕುಷ್ಟರೋಗದವಳು ಎಂದು ಅಲ್ಲಿಯ ವಿದ್ವಾಂಸರು ಅರ್ಥೈಸಿದಾಗ ಆಚಾರ್ಯರು ಏನು ಹೇಳಿದರು ? | ಮುಂದೆ ಇಲ್ಲಿಗೆಒಬ್ಬ ವಿದ್ವಾಂಸ ಬರುತ್ತಾನೆ ಅವನಲ್ಲಿಇದರ ಅರ್ಥವನ್ನು ಕೇಳಿ ತಿಳಿಯಿರಿ | ೧೯ | |
| ೦೮ | ಮಧ್ವಾಚಾರ್ಯರು ಮೊದಲು ಬದರಿಯಾತ್ರೆಗೆ ಹೋಗುವ ಮುನ್ನ ರಚಿಸಿದ ಗ್ರಂಥಯಾವುದು ? | ಗೀತಾಭಾಷ್ಯ | ೩೨ | ಮಧ್ವಾಚಾರ್ಯರ ಮೊದಲ ಬದರಿಯಾತ್ರೆ |
| ೦೯ | ಗೀತಾಭಾಷ್ಯವನ್ನು ರಚಿಸಿದ ಮಧ್ವಾಚಾರ್ಯರು ಆ ಗ್ರಂಥವನ್ನು ಎಲ್ಲಿ ಯಾರಿಗೆ ಅರ್ಪಿಸಿದರು ? | ಬದರಿಯಲ್ಲಿ ನಾರಾಯಣನಿಗೆ | ೩೮ | |

| | | | | |
|---|---|---|---|---|
| <u>೧೦</u> | ಮಧ್ವಾಚಾರ್ಯರ ವಿಶೇಷ ಸಾಮರ್ಥ್ಯವನ್ನು ತಿಳಿಸುವ ಗೀತಾಭಾಷ್ಯದಲ್ಲಿ ನಾರಾಯಣನು ಮಾಡಿದ ತಿದ್ದುಪಡಿಯಾವುದು? | ಲೇಶತಃ ಬದಲು ಶಕ್ತಿತಃ ಎಂದು | <u>೪೦</u> | |
| <u>೧೧</u> | ಬದರಿಯಲ್ಲಿಎಲ್ಲರೂ ಮಲಗಿದ್ದಾಗ ನಾರಾಯಣ ಭೂಮಿಯನ್ನು ಬಡಿದು ಮತ್ತೊಮ್ಮೆ ಪ್ರವಚನ ಮಾಡಿ ಎಂದದ್ದುಯಾರಿಗೆ ಕೇಳಿಸಿತು ? | ಎಲ್ಲಾ ಶಿಷ್ಯರಿಗೂ | <u>೪೧</u> | |
| <u>೧೨</u> | ಬದರಿಯ ಅನಂತಮಠದಲ್ಲಿ ಮಧ್ವಾಚಾರ್ಯರು ಮಾಡಿದ ವೃತ ಯಾವುದು? | ಕಾಷ್ಠಮೌನ ಉಪವಾಸ | <u>೪೪</u> | |
| <u>೧೩</u> | ಮಧ್ವಾಚಾರ್ಯರು ಎಷ್ಟು ದಿನ ಕಾಷ್ಠಮೌನಉಪವಾಸ ಮಾಡಿದರು? | ೪೮ ದಿನ | <u>೪೫</u> | |
| <u>೧೪</u> | ನೇದೃಶಂ ಸ್ಥಲಮಲಂ ಶಮಲಘ್ನಂ ನಾಸ್ಯತೀರ್ಥಸಲಿಲಸ್ಯ ಸಮಂ ವಾ । ನಾಸ್ತಿವಿಷ್ಣುಸದೃಶಂ ನನು ದೈವಂ ನಾಸ್ಮದುಕ್ತಿಸದೃಶಂ ಹಿತರೂಪಮ್ ॥<br>ಚೆನ್ನಾಗಿ ಪಾಪವನ್ನು ಪರಿಹರಿಸುವುದರಲ್ಲಿ ಈ ಬದರೀಕ್ಷೇತ್ರಕ್ಕೆ ಸಮನಾದ ಮತ್ತೊಂದು ಕ್ಷೇತ್ರವಿಲ್ಲ. ಇಲ್ಲಿರುವ ಗಂಗಾತೀರ್ಥಕ್ಕೆ ಸಮಾನವಾದ ಪಾಪನಾಶಕವಾದ ತೀರ್ಥಜಲವೂ ಬೇರೆ ಇಲ್ಲ. ಶ್ರೀನಾರಾಯಣ ದೇವರಿಗೆ ಸಮಾನರಾದ ಮತ್ತೊಬ್ಬ ದೇವರೂ ಕೂಡ ಇಲ್ಲ. ನಮ್ಮ ಉಪದೇಶ ವಚನಕ್ಕೆ ಸಮಾನಾದ ಹಿತವಚನವೂ ಬೇರೆ ಇಲ್ಲ. ಏನಿದು ? | ಮಧ್ವಾಚಾರ್ಯರು ಬದರಿಯಲ್ಲಿ ಬರೆದು ಶಿಷ್ಯರಿಗೆ ನೀಡಿದ ಭವ್ಯ ಸಂದೇಶ | <u>೪೭</u> | |
| <u>೧೫</u> | ಮಧ್ವಾಚಾರ್ಯರು ತಮ್ಮನ್ನು ಬಿಟ್ಟು ಉತ್ತರಬದರಿಗೆ ಹೊರಟಾಗ ಶಿಷ್ಯರು'ನಮ್ಮನ್ನು ಬಿಟ್ಟು ಹೋಗಬೇಡಿ'ಎಂದು ಹೇಳಿಕೊಳ್ಳುವ ಮನಸ್ಸಿದ್ದರೂ ಹೇಳದೆ ಸುಮ್ಮನಿದ್ದರು. ಏಕೆ ? | ಮಧ್ವಾಚಾರ್ಯರ ತೀರ್ಮಾನವನ್ನು ಗೌರವಿಸಬೇಕೆಂದು | <u>೪೯</u> | |
| <u>೧೬</u> | ಸತ್ಯತೀರ್ಥರು ಮಧ್ವಾಚಾರ್ಯರ ಬಳಿ ಎಷ್ಟು ಬಾರಿ ಐತರೇಯ ಶ್ರುತಿಯ ಅರ್ಥವನ್ನು ಕೇಳಿದ್ದಾರೆ ? | ಮೂರು ಬಾರಿ | <u>೫೦</u> | |
| <u>೧೭</u> | ಉತ್ತರ ಬದರಿಗೆ ಹೋಗುತ್ತಿದ್ದಾಗ ಹಿಂಬಾಲಿಸಿದ ಸತ್ಯತೀರ್ಥರನ್ನು ಮಧ್ವಾಚಾರ್ಯರು ಏನು ಮಾಡಿದರು ? | ಹಿಂತಿರುಗಿ ಎಂದು ಕೈಯಿಂದ ಸನ್ನೆ ಮಾಡಿದರು | <u>೫೨</u> | |
| <u>೧೮</u> | ತುಂಬಾ ದೂರ ಮಧ್ವಾಚಾರ್ಯರನ್ನು ಹಿಂಬಾಲಿಸಿದ ಸತ್ಯತೀರ್ಥರು ಶ್ರೀಮದಾಚಾರ್ಯರ ಕೈ ಸನ್ನೆಯಿಂದ ಏನಾದರು ? | ಅನಂತಮಠವನ್ನುತಲುಪಿದರು | <u>೫೨</u> | |
| | **ಸರ್ಗ ೭** | | | |
| <u>೦೧</u> | ಉತ್ತರಬದರಿಗೆ ಹೋದ ಶ್ರೀಮಧ್ವಾಚಾರ್ಯರು ಯಾರನ್ನು ಭೇಟಿಮಾಡಿದರು ? | ವೇದವ್ಯಾಸರನ್ನು | <u>೧೬</u> | ಉತ್ತರ ಬದರಿಯಲ್ಲಿ ಮಧ್ವಾಚಾರ್ಯರು |
| <u>೦೨</u> | ವೇದವ್ಯಾಸರಿಂದ ರಚಿತವಾದ ಗ್ರಂಥಗಳು ಯಾವುವು? | ಮಹಾಭಾರತ, ೧೮ ಪುರಾಣಗಳು ಮತ್ತು ಬ್ರಹ್ಮಸೂತ್ರ | <u>೨೦</u> | |
| <u>೦೩</u> | ಮಗನಾದ ಶುಕಾಚಾರ್ಯರಿಗಿಂತಲೂ ಹೆಚ್ಚು ವೇದವ್ಯಾಸರ ಪ್ರೀತಿಯನ್ನು ಪಡೆದವರು ಯಾರು ? | ಶ್ರೀ ಮಧ್ವಾಚಾರ್ಯರು | <u>೫೫</u> | |
| | **ಸರ್ಗ ೮** | | | |
| <u>೦೧</u> | ವೇದವ್ಯಾಸದೇವರ ಮತ್ತು ಮಧ್ವಾಚಾರ್ಯರ ಗುರು–ಶಿಷ್ಯ ಸಂಬಂಧವನ್ನು ಹೊಗಳಿದವರು ಯಾರು? | ದೇವತೆಗಳು | <u>೦೨</u> | ನಾರಾಯಣಾಶ್ರಮದಲ್ಲಿ ಮಧ್ವಾಚಾರ್ಯರು |
| <u>೦೨</u> | ವ್ಯಾಸಾಶ್ರಮದಲ್ಲಿವೇದವ್ಯಾಸರಿಂದ ಪಾಠವನ್ನು ಕೇಳಿದ ಮಧ್ವಾಚಾರ್ಯರು ಎಲ್ಲಿಗೆ ಹೋದರು ? | ನಾರಾಯಣಾಶ್ರಮಕ್ಕೆ | <u>೦೮</u> | |
| <u>೦೩</u> | ನಾರಾಯಣಾಶ್ರಮದಲ್ಲಿ ನಾರಾಯಣನು ಮಧ್ವಾಚಾರ್ಯರಿಗೆ ಮಾಡಿದ ಆದೇಶವೇನು? | ಬ್ರಹ್ಮಸೂತ್ರಭಾಷ್ಯರಚನೆ | <u>೪೬</u> | |
| <u>೦೪</u> | ನಾರಾಯಣಾಶ್ರಮದಲ್ಲಿ೩ ವೇದಗಳಂತೆ, ೩ ಅಗ್ನಿಗಳಂತೆ ಕಂಗೊಳಿಸುತ್ತಿದ್ದವರು ಯಾರು? | ವೇದವ್ಯಾಸರು ನಾರಾಯಣ ಮತ್ತು ಮಧ್ವಾಚಾರ್ಯರು | <u>೫೪</u> | |

| | | | | |
|---|---|---|---|---|
| ಸರ್ಗ ೯ | | | | |
| ೦೧ | ನಾರಾಯಣಾಶ್ರಮದಿಂದ ವ್ಯಾಸಶ್ರಮಕ್ಕೆ ಬರುವಾಗ ಮಧ್ವಾಚಾರ್ಯರ ಜೊತೆಗೆ ಇದ್ದವರು ಯಾರು? | ವೇದವ್ಯಾಸರು | ೦೧ | ಬದರಿಗೆ ಹಿಂತಿರುಗಿದ ಮಧ್ವಾಚಾರ್ಯರು |
| ೦೨ | ಮಧ್ವಾಚಾರ್ಯರು ವ್ಯಾಸಾಶ್ರಮದಿಂದ ವೇದವ್ಯಾಸರನ್ನು ಬಿಟ್ಟು ಹೊರಟಾಗ ವಿರಹವೇದನೆಯಾಗಲಿಲ್ಲ ಏಕೆ ? | ಮಧ್ವಾಚಾರ್ಯರ ಹೃದಯದಲ್ಲಿ ವೇದವ್ಯಾಸರು ಯಾವಾಗಲೂ ಇರುವುದರಿಂದ | ೦೪ | |
| ೦೩ | ಅಗ್ನಿಶರ್ಮನೇ ಮೊದಲಾದ ಐದಾರು ಬ್ರಾಹ್ಮಣರು ಪ್ರತ್ಯೇಕವಾಗಿ ಒಟ್ಟಿಗೆ ತುಂಬ ಅನ್ನವನ್ನು ಮಧ್ವಾಚಾರ್ಯರಿಗೆ ಅರ್ಪಿಸಿದ್ದು ಏಕೆ? | ಭಕ್ತಿಯಿಂದ (ಪ್ರಯಾಣಕ್ಕೆ ಹೊರಟರೆಇನ್ನು ಸಿಗುವುದಿಲ್ಲ ಎಂಬ ಕಾರಣದಿಂದ) | ೦೭ | |
| ೦೪ | ಮಧ್ವಾಚಾರ್ಯರು ರಚಿಸಿದ ಬ್ರಹ್ಮಸೂತ್ರಭಾಷ್ಯವನ್ನು ಬರೆದವರು ಯಾರು ? | ಸತ್ಯತೀರ್ಥರು | ೧೩ | |
| ೦೫ | ೧೮ ಶಾಖೆಗಳಿಗೆ ಸಂಬಂಧಿಸಿದ ಅನೇಕ ವೇದ ವಿದ್ವಾಂಸರ ಜೊತೆ ಮಧ್ವಾಚಾರ್ಯರು ವಾದಮಾಡಿದ್ದುಎಲ್ಲಿ? | ಗೋದಾವರೀತೀರದಲ್ಲಿ | ೧೫ | ಶೋಭನ ಭಟ್ಟರಿಗೆ ಮಧ್ವಾಚಾರ್ಯರು ಸಿಕ್ಕಿದ್ದು |
| ೦೬ | ಗೋದಾವರೀತೀರದ ವೇದ ಸಭೆಯಲ್ಲಿ ಮಧ್ವಾಚಾರ್ಯರ ಸಾಮರ್ಥ್ಯವನ್ನು ನೋಡಿ ಅವರ ಶಿಷ್ಯತ್ವವನ್ನು ಪಡೆದವರು ಯಾರು? | ಶೋಭನಭಟ್ಟರು | ೧೭ | |
| ೭ | ಶರಣಾಗತರಾದ ಶೋಭನಭಟ್ಟರು ಮಧ್ವಾಚಾರ್ಯರಿಂದ ಯಾವ ಪಾಠವನ್ನು ಕೇಳಿದರು ? | ಬ್ರಹ್ಮಸೂತ್ರಭಾಷ್ಯ | ೧೮ | |
| ೦೮ | ಶಾಸ್ತ್ರಗಳ ಮಹತ್ವವನ್ನು ತಿಳಿಯದೆ ಮಧ್ವಾಚಾರ್ಯರ ಶಾಸ್ತ್ರಗಳನ್ನು ದೂರಇಡುವವರು – ಶಂಖಗಳನ್ನು ಪುಡಿ ಮಾಡಿ ಸುಣ್ಣ ಮಾಡುವವ ಬಲಮುರಿ ಶಂಖವನ್ನು ಪುಡಿ ಮಾಡಲಾಗದೆ ದೂರ ಎಸೆದಂತೆ.ಈ ಉದಾಹರಣೆ ಕೊಟ್ಟವರು ಯಾರು ? | ಶೋಭನಭಟ್ಟರು | ೨೧ | |
| ೦೯ | ಬದರಿಯಿಂದ ಉಡುಪಿಗೆ ಬಂದ ಮಧ್ವಾಚಾರ್ಯರು ಏನು ಮಾಡಿದರು? | ಅನಂತೇಶ್ವರನಿಗೆ ನಮಸ್ಕಾರ | ೨೯ | ಉಡುಪಿಯಲ್ಲಿ ಮಧ್ವಾಚಾಯ ರ್ರು |
| ೧೦ | ಉಡುಪಿಯಲ್ಲಿ ಜೇಷ್ಠಯತಿಗಳಿಂದ ಆದ ಪ್ರವಚನದ ವಿಷಯ ಯಾವುದು? | ಬ್ರಹ್ಮಸೂತ್ರಭಾಷ್ಯ | ೩೧ | |
| ೧೧ | ಸಜ್ಜನರ ಪಾಪಗಳನ್ನು ಕಳೆಯಲು ಮಧ್ವಾಚಾರ್ಯರು ಅನುಗ್ರಹಿಸಿದ ೨ ಸುದರ್ಶನ ಯಾವುದು? | ಸುದರ್ಶನಚಕ್ರ ಮತ್ತು ಒಳ್ಳೆಯ ಶಾಸ್ತ್ರ | ೩೯ | |
| ೧೨ | ಶಾಸ್ತ್ರಅಧ್ಯಯನ ಮಾಡುವವರಿಗೆ ಬರುವ ವಿಘ್ನಗಳನ್ನು ಪರಿಹರಿಸಿಕೊಳ್ಳಲು ಏನು ಮಾಡಬೇಕು? | ಉಡುಪಿ ಶ್ರೀಕೃಷ್ಣನ ದರ್ಶನ | ೪೦ | |
| ೧೩ | ಶ್ರೀಮಧ್ವಾಚಾರ್ಯರ ಸ್ಪರ್ಶದಿಂದ ವಿಶೇಷ ಸನ್ನಿಧಾನವನ್ನು ಪಡೆದ ಶ್ರೀಕೃಷ್ಣಪ್ರತಿಮೆಯನ್ನು ಮೂವತ್ತುಜನ ಸೇರಿಯೂ ಎತ್ತಲಾಗದಿದ್ದಾಗ ಏನು ಮಾಡಿದರು? | ಶ್ರೀಮಧ್ವಾಚಾರ್ಯರೇ ಅನಾಯಾಸವಾಗಿ ಮಠಕ್ಕೆ ತಂದರು | ೪೨ | |
| ೧೪ | ಶ್ರೀಮಧ್ವಾಚಾರ್ಯರ ಪೂರ್ವಾಶ್ರಮದ ಗುರುಗಳ ಪುತ್ರನಾದ ವಾಸುದೇವನಯಜ್ಞದಲ್ಲಿ'ಯಜ್ಞವನ್ನು ಮಾಡಿಸುವ ಅರ್ಹತೆ ತನಗೆ ಮಾತ್ರ' ಎಂದು ಅಹಂಕಾರ ಪ್ರದರ್ಶಿಸಿದವ ಯಾರು ? | ಜರಾಘಟಿತಗೋತ್ರ (ಮರಡಿತ್ತಾಯ) | | |
| ೧೫ | ಶ್ರೀಮಧ್ವಾಚಾರ್ಯರ ಗುರುಪುತ್ರನಯಾಗಕ್ಕೆ ಹೋತೃಗಳಾಗಿದ್ದವರು ಯಾರು? | ಮಧ್ವಾಚಾರ್ಯರ ಅನುಜ | ೪೮ | |
| ೧೬ | ಮಧ್ವಾಚಾರ್ಯರು ಮಾಡಿಸಿದ ಯಾಗದ ಸಂದೇಶವೇನು ? | ಅಪರೋಕ್ಷಜ್ಞಾನಕ್ಕೆ ಶ್ರವಣಾದಿಗಳಂತೆ ಕರ್ಮವೂ ಸಾಧನ | ೫೧ | |

| ಸರ್ಗ ೧೦ | | | | |
|---|---|---|---|---|
| ೦೧ | ಶ್ರೀಮಧ್ವಾಚಾರ್ಯರಿಗೆ ಮಣ್ಣನ್ನುಅಗೆಯಲು ಪ್ರೇರೇಪಿಸಿ ನಂತರ ತಾನೇ ಮಣ್ಣನ್ನು ಅಗೆಯುತ್ತಾ ಮೈಮರೆತ ರಾಜಯಾರು? | ಈಶ್ವರದೇವ | ೦೪ | ಶ್ರೀಮಧ್ವಾಚಾರ್ಯರ ಸಾಮರ್ಥ್ಯ |
| ೦೨ | ನಾನೇನೇನಾನೇನಾನೇನೋ .. .. ಎಂಬ ಒಂದೇ ಅಕ್ಷರದ ಅಪೂರ್ವವಾದ ಶ್ಲೋಕ ಇರುವುದು ಎಲ್ಲಿ? | ಮಧ್ವವಿಜಯ–೧೧ನೇ ಸರ್ಗ | ೦೬ | |
| ೦೩ | ಮಧ್ವಾಚಾರ್ಯರು ತಮ್ಮ ಶಿಷ್ಯರನ್ನು ದೋಣಿಯೇ ಇಲ್ಲದೆ ಯಾವ ನದಿಯನ್ನು ಸ್ವ ಸಾಮರ್ಥ್ಯದಿಂದ ದಾಟಿಸಿದರು ? | ಗಂಗಾನದಿ | ೦೮ | |
| ೪ | ನದಿಯನ್ನು ದಾಡುತ್ತಿದ್ದ ಮಧ್ವಾಚಾರ್ಯರ ಪರಿವಾರವನ್ನು ತಡೆಯಲು ಬಂದ ರಾಜಭಟರನ್ನು ಮಧ್ವಾಚಾರ್ಯರು ಯಾವ ಭಾಷೆಯಲ್ಲಿ ಮಾತನಾಡಿಸಿದರು ? | ತುರುಷ್ಕಭಾಷೆ | ೧೦ | |
| ೦೫ | ಶ್ರೀಮಧ್ವಾಚಾರ್ಯರ ವರ್ಚಸ್ಸನ್ನು ಕಂಡು ಆಶ್ಚರ್ಯಚಕಿತನಾದ ತುರುಷ್ಕರಾಜ ಏನು ಮಾಡಿದ ? | ಅರ್ಧರಾಜ್ಯವನ್ನೇಕೊಟ್ಟ | ೧೮ | |
| ೦೬ | ಶ್ರೀಮಧ್ವಾಚಾರ್ಯರನ್ನು ಆಕ್ರಮಿಸಲು ಬಂದ ಕಳ್ಳರು ಕೊನೆಗೆ ಏನು ಮಾಡಿಕೊಂಡರು ? | ತಾವುತಾವೇ ಹೊಡೆದುಕೊಂಡರು | ೨೦ | |
| ೦೭ | ನೂರಾರು ಕಳ್ಳರು ಮಧ್ವಾಚಾರ್ಯರನ್ನುಕೊಲ್ಲಲು ಬಂದಾಗ ಮಧ್ವಾಚಾರ್ಯರು ಏನು ಮಾಡಿದರು? | ತಮ್ಮ ಶಿಷ್ಯರಾದ ಉಪೇಂದ್ರತೀರ್ಥರಿಂದ ಓಡಿಸಿದರು | ೨೧ | |
| ೮ | ಯಾರನ್ನುಆಕ್ರಮಿಸಲು ಬಂದ ಸಿಂಹವನ್ನು (ವ್ಯಾಘ್ರರೂಪದದೈತ್ಯನನ್ನು) ಮಧ್ವಾಚಾರ್ಯರು ಪ್ರಹಾರಮಾಡಿದರು ? | ಸತ್ಯತೀರ್ಥರನ್ನು | ೨೩ | |
| ೦೯ | ಶ್ರೀ ಮಧ್ವಾಚಾರ್ಯರು ವ್ಯಾಸಮುಷ್ಟಿಗಳನ್ನು ಯಾರಿಂದ ಪಡೆದರು? | ನಾರಾಯಣನಾದ ವೇದವ್ಯಾಸರಿಂದ | ೨೪ | |
| ೧೦ | ಮಧ್ವಾಚಾರ್ಯರು ಮಹಾಭಾರತತಾತ್ಪರ್ಯ ನಿರ್ಣಯವನ್ನು ಯಾರ ಆದೇಶದಂತೆ ರಚಿಸಿದರು ? | ವೇದವ್ಯಾಸರ ಆದೇಶದಂತೆ | ೨೫ | |
| ೧೧ | ದೋಣಿಗಳಿಲ್ಲದಿದ್ದರೂ ತಾವೊಬ್ಬರೇ ವಸ್ತ್ರವೂ ಒದ್ದೆಯಾಗದಂತೆ ಗಂಗಾ ನದಿಯನ್ನು ದಾಟಿದವರು ಯಾರು ? | ಶ್ರೀಮಧ್ವಾಚಾರ್ಯರು | ೩೦ | |
| ೧೨ | ಶ್ರೀಮಧ್ವಾಚಾರ್ಯರು ಹಸ್ತಿನಾಪುರದ ಯಾವಸ್ಥಳದಲ್ಲಿ ಚಾತುರ್ಮಾಸ್ಯವನ್ನು ಕೈಗೊಂಡರು ? | ಏಕಾಂತ ಸ್ಥಳದ ಮಠವೊಂದರಲ್ಲಿ | ೩೪ | |
| ೧೩ | ತಾವೇ ಬಲಿಷ್ಠರು ಎಂಬ ಅಹಮ್ಮಿನಲ್ಲಿ ಇದ್ದ ಎಷ್ಟು ಶಿಷ್ಯರನ್ನು ಮಧ್ವಾಚಾರ್ಯರು ಏಕಕಾಲದಲ್ಲಿ ಹಿಡಿದಿಟ್ಟು ನಿಗ್ರಹಿಸಿದರು ? | ೧೫ ಜನ | ೩೯ | |
| ೧೪ | ವಾದದಲ್ಲಿ ಮಧ್ವಾಚಾರ್ಯರ ಮುಂದೆ ಸೋತಾಗ ವಿಷಯಾಂತರ ಮಾಡಲು ಜ್ಞಾನ ಶಬ್ದದ ಅರ್ಥವನ್ನು ಕೇಳಿ ಅವಮಾನಿತನಾದವ ಯಾರು? | ಇಂದ್ರಪುರಿ ಎಂಬ ಸನ್ಯಾಸಿ | ೪೨ | |
| ೧೫ | ಮಧ್ವಾಚಾರ್ಯರು ಶಿಷ್ಯರಿಂದ ಮಣ್ಣನ್ನು ಅಗೆಸಿ ತಾವು ಮೊದಲು ಉಪಯೋಗಿಸಿದ ಮಹಾಗದೆಯನ್ನು ತೋರಿಸಿದ ಸ್ಥಳ ಯಾವುದು ? | ಕುರುಕ್ಷೇತ್ರ | ೪೯ | |
| ೧೬ | ರುದ್ರದೇವರು ವಿಪ್ರವೇಶದಲ್ಲಿ ಶ್ರೀಮಧ್ವಾಚಾರ್ಯರ ಬಳಿ ಹೋಗಿ ನಮಸ್ಕರಿಸಿದ ಸ್ಥಳ ಯಾವುದು? | ಹೃಷೀಕೇಶ | ೫೦ | |
| ೧೭ | ರಾಜಕೇಳಿ ಎಂಬ ದೊಡ್ಡಗಾತ್ರದ ಸಾವಿರ ಬಾಳೆಹಣ್ಣನ್ನು ಮಧ್ವಾಚಾರ್ಯರು ಜೀರ್ಣಿಸಿಕೊಂಡದ್ದು ಎಲ್ಲಿ ? | ಇಷುಪಾತ– ಪರಶುರಾಮಕ್ಷೇತ್ರ | ೫೧ | |
| ೧೮ | ಮಧ್ವಾಚಾರ್ಯರು ೪೦೦೦ ಹೆಬ್ಬಾಳೆ ಮತ್ತು ೩೦ ಕೊಡ ಹಾಲನ್ನು ಕುಡಿದು ಜೀರ್ಣಿಸಿಕೊಂಡ ಘಟನೆ ನಡೆದದ್ದುಎಲ್ಲಿ? | ಗೋವಾ | ೫೨ | |
| ೧೯ | ಎಲ್ಲರೂ ಮೈಮರೆಯುವಂತೆ ಸುಮಧುರವಾಗಿ ಹಾಡಿ ಮರದಲ್ಲಿ ಆ ಕೂಡಲೇ ಫಲಪುಷ್ಪಗಳು ಅರಳುವಂತೆ ಮಧ್ವಾಚಾರ್ಯರು ಮಾಡಿದ ಆ ಸ್ಥಳ ಯಾವುದು? | ಗೋವಿಷಯ (ಪಶುಪೆ) | ೫೩ | |

| | | | | |
|---|---|---|---|---|
| **ಸರ್ಗ ೧೧** | | | | |
| **೦೧** | ಶೇಷದೇವರು, ಸನಕಾದಿಗಳು ಮಧ್ವಾಚಾರ್ಯರ ಬಳಿ ಬಂದದ್ದು ಏಕೆ? | ಮಧ್ವಾಚಾರ್ಯರ ಪ್ರವಚನವನ್ನು ಕೇಳಲು | **೦೧** | ಮಧ್ವಾಚಾರ್ಯರ ಗ್ರಂಥಗಳ ಶಕ್ತಿ |
| **೦೨** | ಮಧ್ವಾಚಾರ್ಯರ ಗ್ರಂಥಗಳ ಅಧ್ಯಯನದ ಫಲಗಳೇನು ? | ಮುಖ್ಯಫಲ ಮೋಕ್ಷಮತ್ತು ಅಮುಖ್ಯಫಲ ಸ್ವರ್ಗಾದಿಗಳು | **೦೬** | |
| **ಸರ್ಗ ೧೨** | | | | |
| **೦೧** | ಮಧ್ವಾಚಾರ್ಯರನ್ನು ಮಣಿಸಲು ಮಾಯಾವಾದಿಗಳು ಯಾರನ್ನು ಆಶ್ರಯಿಸಿದರು ? | ಚೋಲಜ ಮತ್ತು ದ್ವೀಪಿಪುರಿ (ಪದ್ಮತೀರ್ಥ ಮತ್ತು ಪುಂಡರಿಕಪುರಿ) | **೦೨** | ಮಾಯಾವಾದಿಗಳ ವ್ಯರ್ಥಪ್ರಯತ್ನ |
| **೦೨** | ಮೀಮಾಂಸಕರನ್ನು ಭ್ರಷ್ಟರೆಂದು ಪ್ರತಿಪಾದಿಸಿದವರು ಮಾಯಾವಾದಿಗಳು, ಮಾಯಾವಾದಿಗಳನ್ನು ಭ್ರಷ್ಟರೆಂದು ಸಮರ್ಥಿಸಿದವರು ಯಾರು? | ತತ್ವವಾದಿಗಳು | **೦೮** | |
| **೦೩** | ೧ ಕಾಲು ಲಕ್ಷ ಶಾಸ್ತ್ರಗಳನ್ನು ಹೊಂದಿದ ಮಾಯಾವಾದವನ್ನುಒಂದು ವಾಕ್ಯದಿಂದ ನಿರುತ್ತ್ರವನ್ನಾಗಿಸಿದವರು ಯಾರು? | ಶ್ರೀ ಮಧ್ವಾಚಾರ್ಯರು | **೧೧** | |
| **೦೪** | ಮಾಯಾವಾದಿಗಳೂ ಮಧ್ವಾಚಾರ್ಯರ ಭಾಷ್ಯಯನ್ನು ಸ್ತುತಿಸಿದ ಬಗೆ. | ಅತ್ಯಂತ ಸರಳ ಮತ್ತುಅತ್ಯಂತ ಪ್ರಬಲ | **೧೩** | |
| **೦೫** | ಎಲ್ಲಾ ಮಾಧ್ವಶಿಷ್ಯರಲ್ಲಿ ಕಾಣುವ ಸಮಾನವಾದ ಚಿಹ್ನೆ ಯಾವುದು? | ಶಂಕ ಚಕ್ರಾದಿ ವೈಷ್ಣವ ಚಿಹ್ನೆ | **೧೪** | |
| **೦೬** | ಶಾಸ್ತ್ರಗಳಲ್ಲಿ ಮಧ್ವಾಚಾರ್ಯರನ್ನು ಜಯಿಸಲು ಸಾಧ್ಯವಾಗದೇ ಇದ್ದಾಗ ಮಾಯಾವಾದಿಗಳು ಯಾವ ಮಾರ್ಗವನ್ನು ಅನುಸರಿಸಿದರು? | ಷಟ್ಕರ್ಮ, ಮಂತ್ರ ಮತ್ತು ಔಷಧ | **೨೦** | |
| **೦೭** | ಮಾಯಾವಾದಿಗಳು ಮಧ್ವಾಚಾರ್ಯರ ಬಗ್ಗೆ ಮಾಡಿದ ಅಪಪ್ರಚಾರವೇನು? | ಪ್ರಾಚೀನ ಸಂಪ್ರದಾಯಯನ್ನು ಬದಲಿಸುತ್ತಿದ್ದಾರೆ | **೨೨** | |
| **೦೮** | ತಮ್ಮ ಊರಿಗೆ ಬಂದ ಮಧ್ವಾಚಾರ್ಯರಿಗೆ ತೊಂದರೆ ಮಾಡಬೇಕೆಂದು ಬಯಸಿದ ಮಾಯಾವಾದಿಗಳು ಏನು ಮಾಡಿದರು ? | ಅವರ ಗ್ರಂಥಗಳನ್ನು ಅಪಹರಿಸಿದರು | **೨೪** | |
| **೦೯** | ಮಧ್ವಾಚಾರ್ಯರು ವೇದಗಳಿಗೆ ವ್ಯಾಖ್ಯಾನವನ್ನು ಮಾಡಿದಾಗ ಪೌಡ್ರಕ ವಾಸುದೇವನಂತೆ ತಾನು ವ್ಯಾಖ್ಯಾನ ಮಾಡಲು ಹೋಗಿ ಸೋತವ ಯಾರು? | ಪುಂಡರಿಕಪುರಿ | **೩೫** | |
| **೧೦** | ಆರು ವೇದಾಂಗಗಳಲ್ಲಿ ಹೇಳಿದ ಎಲ್ಲಾ ನಿಯಮಗಳನ್ನು ಅನುಸರಿಸಿ ಸ್ಪಷ್ಟವಾಗಿ ವೇದಘೋಷವನ್ನು ಮಾಡುತ್ತಿದ್ದವರು ಯಾರು? | ಶ್ರೀಮಧ್ವಾಚಾರ್ಯರು | **೩೯** | |
| **೧೧** | ವೇದವನ್ನು ವ್ಯಾಖ್ಯಾನ ಮಾಡಲು ಹೊರಟ ಪುಂಡರಿಕಪುರಿಯು ಹೇಗೆ ಸೋತ ? | ಸರಿಯಾಗಿ ಪದಚ್ಛೇದವನ್ನು ಮಾಡಲು ಬರದೇ ಸೋತ | **೪೦** | |
| **೧೨** | ಮಧ್ವಾಚಾರ್ಯರಗ್ರಂಥ ಪಾಲಕರು ಯಾರು? | ಶಂಕರ ಪಂಡಿತಾಚಾರ್ಯರು | **೪೨** | |
| **೧೩** | ಎಲ್ಲಾ ಮಾಯವಾದಿಗಳನ್ನು ಸೋಲಿಸಿದ ಮಧ್ವಾಚಾರ್ಯರನ್ನು ಯಾರಿಗೆ ಹೋಲಿಸಲಾಗಿದೆ? | ನರಸಿಂಹ | **೫೧** | |
| **೧೪** | ಪದ್ಮತೀರ್ಥರೇ ಮೊದಲಾದವರನ್ನು ಸೋಲಿಸಿ ಮಧ್ವಾಚಾರ್ಯರು ಚಾತುರ್ಮಾಸ್ಯವ್ರತವನ್ನು ಕೈಗೊಂಡ ಸ್ಥಳ ಯಾವುದು? | ಪ್ರಾಗ್ರ್ಯವಾಟ(ಕೋಡಿಪಾಡಿ) | **೫೪** | |
| **ಸರ್ಗ ೧೩** | | | | |
| **೦೧** | ಕೊಡಿಪಾಡಿಯಚಾತುರ್ಮಾಸ್ಯವನ್ನು ಪೂರೈಸಿದ ಮಧ್ವಾಚಾರ್ಯರನ್ನು ತಮ್ಮಲ್ಲಿಗೆ ಬರಬೇಕೆಂದು ಪ್ರಾರ್ಥಿಸಿದ ರಾಜ ಯಾರು? | ಜಯಸಿಂಹ | **೦೨** | ಜಯಸಿಂಹನ ಬಳಿ ಮಧ್ವಾಚಾರ್ಯರು |
| **೦೨** | ಕಬೆನಾಡಿಗೆ(ಕಾಸರಗೋಡಿಗೆ) ಬಂದ ಮಧ್ವಾಚಾರ್ಯರು ಯಾವ ದೇವಸ್ಥಾನವನ್ನು ಭೇಟಿಮಾಡಿದರು ? | ಮದನೇಶ್ವರ(ಮದೂರು) | **೦೯** | |
| **೦೩** | ಮಧ್ವಾಚಾರ್ಯರು ಪ್ರಯಾಣದಲ್ಲಿ ಸನ್ಯಾಸಿ ಶಿಷ್ಯರು ಏನು ಮಾಡಿದರು ? | ದೇವರ ಪೆಟ್ಟಿಗೆಯನ್ನು ಹೊರುತ್ತಿದ್ದರು | **೧೩** | ಮಧ್ವಾಚಾರ್ಯರ ಶಿಷ್ಯರ ನಡೆ |

| | | | | |
|---|---|---|---|---|
| **೦೪** | ಮಧ್ವಾಚಾರ್ಯರ ಪ್ರಯಾಣದಲ್ಲಿಯುವ ಶಿಷ್ಯರು ಏನು ಮಾಡುತ್ತಿದ್ದರು? | ಪುಸ್ತಕಗಳನ್ನು ಹೊರತ್ತಿದ್ದರು | **೧೪** | |
| **೦೫** | ಮಧ್ವಾಚಾರ್ಯರು ಮದನೇಶ್ವರದಿಂದ ಹೊರಟಾಗ ಆದ ಶುಭಶಕುನವೇನು ? | ಘಂಟೆಯನಾದ | **೧೬** | |
| **೦೬** | ಮಧ್ವಾಚಾರ್ಯರ ಶಿಷ್ಯರ ಸಮೂಹ ಎಂಥದ್ದು? | ನೂರಾರುಯತಿಗಳು, ಗ್ರಹಸ್ಥರು, ಬ್ರಹ್ಮಚಾರಿಗಳು | **೧೯** | |
| **೦೭** | ಮಧ್ವಾಚಾರ್ಯರ ಪರಿವಾರದವರು ಪ್ರಯಾಣದಲ್ಲಿಯಾರನ್ನು ನೋಡುತ್ತಾಆಯಾಸವನ್ನು ಪರಿಹರಿಸಿಕೊಳ್ಳುತ್ತಿದ್ದರು ? | ಮಧ್ವಾಚಾರ್ಯರನ್ನು | **೨೦** | |
| **೦೮** | ಜಯಸಿಂಹನಿಗೆ ಇದ್ದ ಮತ್ತೊಂದು ಹೆಸರೇನು? | ಸ್ತಂಭಸಿಂಹ (ಕಬೆಸಿಂಹ) | **೨೧** | ಜಯಸಿಂಹನ ಬಳಿ ಮಧ್ವಾಚಾರ್ಯರು |
| **೦೯** | ಜಯಸಿಂಹನು ಮಧ್ವಾಚಾರ್ಯರನ್ನು ಹೇಗೆ ಸ್ವಾಗತಿಸಿದ ? | ವಾಹನದಿಂದಇಳಿದು, ಬ್ರಾಹ್ಮಣರನ್ನು ಮುಂದಿರಿಸಿಕೊಂಡು | **೨೨** | |
| **೧೦** | ವಿಷ್ಣುಮಂಗಲಕ್ಕೆ ಬಂದ ಮಧ್ವಾಚಾರ್ಯರನ್ನು ನೋಡಲು ಯಾವ ಗ್ರಾಮದ ಜನರು ಬಂದರು? | ವಾಟ ಮತ್ತು ಸಮವಾಯ (ಪಾಡಿ ಮತ್ತುಕುಡೆ) ಗ್ರಾಮದಜನರು | **೨೪** | |
| **೧೧** | ಪ್ರಯಾಣಕಾಲದಲ್ಲಿ ಮಧ್ವಾಚಾರ್ಯರ ಸುತ್ತಲಿನ ಜನರು ಏನು ಮಾಡುತ್ತಿದ್ದರು ? | ಶಂಕಚಕ್ರವನ್ನು ಧರಿಸಿ ದೇವರಕೀರ್ತನೆಯನ್ನು ಹಾಡುತ್ತಾ, ಕುಣಿಯುತ್ತ ಬರುತ್ತಿದ್ದರು | **೨೫** | |
| **೧೨** | ಸಾವಿರಾರುಜನರ ನೂಕು ನುಗ್ಗಲಿನಲ್ಲಿಯೂ ಪ್ರಕಾಶಿಸುತ್ತಿದ್ದ ಮಧ್ವಾಚಾರ್ಯರು ಯಾವದೇವಾಲಯವನ್ನು ಪ್ರವೇಶಿಸಿದರು ? | ವಿಷ್ಣುಮಂಗಲ | **೩೮** | |
| **೧೩** | ತ್ರಿವಿಕ್ರಮ ಪಂಡಿತಾಚಾರ್ಯರ ತಂದೆಯ ಹೆಸರೇನು? | ಸುಬ್ರಹ್ಮಣ್ಯ ಪಂಡಿತಾಚಾರ್ಯ | **೪೩** | ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಮಧ್ವಾಚಾರ್ಯರು ಸಿಕ್ಕಿದ್ದು |
| **೧೪** | ತ್ರಿವಿಕ್ರಮ ಪಂಡಿತಾಚಾರ್ಯರ ಗೋತ್ರ ಯಾವುದು? | ಆಂಗಿರಸ | **೪೩** | |
| **೧೫** | ತ್ರಿವಿಕ್ರಮ ಪಂಡಿತಾಚಾರ್ಯರು ಚಿಕ್ಕ ವಯಸ್ಸಿನಲ್ಲಿಯೇ ಬರೆದ ಮಹಾಕಾವ್ಯಯಾವುದು? | ಉಷಾಹರಣ | **೪೮** | |
| **೧೬** | ತ್ರಿವಿಕ್ರಮ ಪಂಡಿತಾಚಾರ್ಯರು ವಿದ್ಯಾರ್ಥಿಯಾಗಿದ್ದಾಗ ಮಾಡಿದ ಯಾವ ಆಕ್ಷೇಪ ಗುರುಗಳಿಗೂ ಪರಿಹರಿಸಲಾಗಲಾಗಲಿಲ್ಲ? | ಮಾಯಾವಾದದದೋಷ | **೪೯** | |
| **೧೭** | ಮಾಯವಾದದ ಶ್ರೇಷ್ಠ ಪಂಡಿತರಾಗಿದ್ದ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಅವರ ತಂದೆ ನೀಡಿದ ಸಂದೇಶವೇನು? | ಮಾಯಾವಾದದ ನಿರ್ಗುಣ ಉಪಾಸನೆ ಸರಿಇಲ್ಲ | **೫೨** | |
| **೧೮** | ಶಾಂಕರಸೂತ್ರ ಭಾಷ್ಯವನ್ನು ಅಧ್ಯಯನ ಮಾಡಿದ ತ್ರಿವಿಕ್ರಮ ಪಂಡಿತಾಚಾರ್ಯರ ಅಭಿಪ್ರಾಯವೇನು? | ಈ ಭಾಷ್ಯ ಸೂತ್ರಕ್ಕೆ ಅನುಗುಣವಾಗಿಲ್ಲ | **೫೬** | |
| **೧೯** | ನಿರ್ಗುಣೋಪಾಸನೆ ಸರಿ ಇಲ್ಲಎಂದು ತೀರ್ಮಾನಿಸಿದ ತ್ರಿವಿಕ್ರಮ ಪಂಡಿತಾಚಾರ್ಯರ ಚರ್ಯೆ ಹೇಗಿತ್ತು? | ಸದಾಚಾರ ಮತ್ತು ಹರಿಸ್ಮರಣೆ | **೬೦** | |
| **೨೦** | ನವಕಾವ್ಯರಸಪ್ರಿಯರು ಯಾರು? | ತ್ರಿವಿಕ್ರಮ ಪಂಡಿತಾಚಾರ್ಯರು | **೬೩** | |
| **೨೧** | ಮಾಯಾವಾದವನ್ನು ರಕ್ಷಿಸಿ ಎಂದು ಬಂದಜನರಿಗೆ ನಾನೊಬ್ಬನೇ ಮಧ್ವಾಚಾರ್ಯರನ್ನು ಜಯಿಸುತ್ತೇನೆ ಎಂದ ತ್ರಿವಿಕ್ರಮ ಪಂಡಿತಆಚಾರ್ಯರ ಮಾತು– | ಮಾಯಾವಾದಿಗಳನ್ನು ಸಮಾಧಾನ ಪಡಿಸಲು | **೬೫** | |
| **೨೨** | ರಾತ್ರಿಯ ಹೊತ್ತುಯಾರಿಗೂ ತಿಳಿಯದೆ ಮಧ್ವಾಚಾರ್ಯರ ಗ್ರಂಥಗಳನ್ನು ಅಧ್ಯಯನ ಮಾಡಿದ ತ್ರಿವಿಕ್ರಮ ಪಂಡಿತರಿಗೆ ಅನಿಸಿದ್ದೇನು? | ಮಧ್ವರ ಸಿದ್ಧಾಂತವೇ ಸರಿಯಾದ ಸಿದ್ಧಾಂತ | **೬೭** | |
| | | **ಸರ್ಗ ೧೪** | | |
| **೦೧** | ಮಧ್ವಾಚಾರ್ಯರಲ್ಲಿ ಶರಣಾಗತನಾದ ಜಯಸಿಂಹನನ್ನು ಅಭಿನಂದಿಸಿದವರು ಯಾರು? | ತ್ರಿವಿಕ್ರಮ ಪಂಡಿತಾಚಾರ್ಯರು | **೦೪** | ಜಯಸಿಂಹನ ಬಳಿ ಮಧ್ವಾಚಾರ್ಯರು |

| | | | | |
|---|---|---|---|---|
| **೦೨** | ಮಧ್ವಾಚಾರ್ಯರ ಶಿಷ್ಯರು ಯಾವಾಗ ಮಲಗುತ್ತಿದ್ದರು ? | ಗುರುಗಳು ಮಲಗಿದ ನಂತರ | **೦೯** | ದಿನಚರಿ |
| **೩** | ಉಷಃಕಾಲದಲ್ಲಿ ಮಧ್ವಾಚಾರ್ಯರು ಏಳುವಾಗ ಅವರ ಶಿಷ್ಯರು ಏಳುವುದು ಸ್ವಲ್ಪತಡವಾಗುತ್ತಿತ್ತು ಕಾರಣವೇನು? | ಅಧ್ಯಯನ ನಿಮಿತ್ತ ಮಲಗುವುದುತಡವಾದ್ದರಿಂದ | **೧೦** | |
| **೦೪** | ಮಧ್ವಾಚಾರ್ಯರಿಂದ ದೇವರಿಗೆ ಅರ್ಪಿತವಾದ ನಿರ್ಮಾಲ್ಯ ಪುಷ್ಪಗಳಲ್ಲಿ ಸುರಿಯುತ್ತಿದ್ದ ಪದಾರ್ಥವೇನು ?(ಅದನ್ನು ಮಂದರು ಏನೆಂದು ತಿಳಿಯುತ್ತಿದ್ದರು) ? | ಅಮೃತ (ತುಪ್ಪ) | **೧೩** | |
| **೦೫** | ಪ್ರಾತಃಕಾಲದ ಅನುಷ್ಠಾನವನ್ನು ಮುಗಿಸಿ ಮಧ್ವಾಚಾರ್ಯರು ಏನು ಮಾಡುತ್ತಿದ್ದರು? | ಪಾಠ | **೧೮** | |
| **೦೬** | ಸಿದ್ಧಯೇ ಸ್ಯಾದ್ಧಿ ಯತ್ನ: ಸಿದ್ಧಿಗೆ ಪ್ರಯತ್ನವೇಕಾರಣ, ಎಂಬ ಮಾತು ಯಾರನ್ನು ಕುರಿತು ಹೇಳಿದ್ದು ? | ಮಧ್ವಾಚಾರ್ಯರ ಶಿಷ್ಯರನ್ನು ಕುರಿತು | **೨೧** | |
| **೦೭** | ೧೨ ವರ್ಷಗಳ ಕಾಲ ಉಪವಾಸ ಮಾಡಿದರೆ ಬರುವ ಫಲ ಇದರಿಂದ ಬರುತ್ತದೆ. | ವಿಷ್ಣುಪಾದೋದಕಪ್ರಾಶನದಿಂದ | **೨೯** | |
| **೦೮** | ಮಧ್ವಾಚಾರ್ಯರ ಪಾದೋದಕವನ್ನು ಎಲ್ಲ ಶಿಷ್ಯರು ತಮ್ಮತಲೆಯಲ್ಲಿ ಧರಿಸಿದಾಗ ಭೂಮಿಗೆ ಬೇಸರವಾಗುತ್ತಿತ್ತು. ಏಕೆ ? | ತನಗೆ ಉಳಿಸಲಿಲ್ಲ ಎಂದು | **೩೨** | |
| **೦೯** | ಮಧ್ವಾಚಾರ್ಯರು ಪ್ರತಿನಿತ್ಯ ಪೂಜೆಯಲ್ಲಿ ಎಷ್ಟು ಉಪಚಾರ,ಎಷ್ಟು ಅನೂಪಚಾರವನ್ನು ಅರ್ಪಿಸುತ್ತಿದ್ದರು ? | ಉಪಚಾರ ೧೬ ಮತ್ತು ೬ ಅನೂಪಚಾರ | **೩೬** | |
| **೧೦** | ಮಧ್ವಾಚಾರ್ಯರು ಪೂಜೆಯಲ್ಲಿ ಎಷ್ಟು ವಿಧದ ಪುಷ್ಪಗಳನ್ನು ಅರ್ಪಿಸುತ್ತಿದ್ದರು ? | ಅಷ್ಟಭಾವಪುಷ್ಪಗಳನ್ನು | **೩೭** | |
| **೧೧** | ಮಧ್ವಾಚಾರ್ಯರನ್ನು ಶಿಷ್ಯರು, ಭಕ್ತರು ಮಾತನಾಡಿಸುತ್ತಿದ್ದಾಗ ಹೇಗೆ ಇರುತಿದ್ದರು? | ಬಾಯಿಗೆ ತಮ್ಮ ಕೈಯನ್ನುಅಡ್ಡ ಹಿಡಿದು | **೪೧** | |
| **೧೨** | ಮಧ್ವಾಚಾರ್ಯರ ಸೇವೆಗಾಗಿ ತಾ ಮುಂದು,ತಾ ಮುಂದು ಎಂದು ಬರುತ್ತಿದ್ದ ಶಿಷ್ಯ ವರ್ಗಯಾವುದು ? | ಗ್ರಹಸ್ಥ ವರ್ಗ | **೪೨** | |
| **೧೩** | ಅಧ್ಯಯನಾದಿಗಳಲ್ಲಿ ತೊಡಗಿದ್ದ ಮಧ್ವಾಚಾರ್ಯರ ಶಿಷ್ಯರು ಎಲ್ಲಾ ಕೆಲಸಗಳನ್ನು ಬದಿಗಿಟ್ಟುಕುಳಿತುಕೊಳ್ಳುತ್ತಿದ್ದದ್ದು ಯಾವಾಗ? | ಮಧ್ವಾಚಾರ್ಯರ ಪಾಠ (ಪ್ರವಚನ) ಪ್ರಾರಂಭವಾದಾಗ | **೪೪** | |
| **೧೪** | ಸಾಯಂಕಾಲವಾದಕೂಡಲೇ ಮಧ್ವಾಚಾರ್ಯರ ಶಿಷ್ಯರೆಲ್ಲಾ ಏನು ಮಾಡುತ್ತಿದ್ದರು? | ಸಂಧ್ಯಾವಂದನೆ | **೪೯** | |
| | | **ಸರ್ಗ ೧೫** | | |
| ೧ | ಬ್ರಹ್ಮಸೂತ್ರಭಾಷ್ಯದ ಪ್ರವಚನವನ್ನು ಮಾಡುತ್ತಿದ್ದಾಗ ಮಧ್ವಾಚಾರ್ಯರಜೊತೆ ೧೫ ದಿನಗಳ ಕಾಲ ವಾದ ಮಾಡಿದ ವಿದ್ವಾಂಸರು ಯಾರು? | ತ್ರಿವಿಕ್ರಮ ಪಂಡಿತ ಆಚಾರ್ಯರು | ೬೯ | ಮುಖಾಮುಖಿ |
| ೨ | ತ್ರಿವಿಕ್ರಮಪಂಡಿತಾಚಾರ್ಯರು ಮಧ್ವಾಚಾರ್ಯರ ಯಾವ ಗ್ರಂಥವನ್ನು ಅಮೃತ ಸಮಾನ ಎಂದಿದ್ದಾರೆ? | ಮಹಾಭಾರತ ತಾತ್ಪರ್ಯನಿರ್ಣಯ | ೭೬ | ಸರ್ವಮೂಲಗಳ ವೈಶಿಷ್ಟ್ಯ |
| ೩ | .. ಸೂರ್ಯ ಮತ್ತುಚಂದ್ರ | ಗೀತಾಭಾಷ್ಯ ಮತು ಗೀತಾತಾತ್ಪರ್ಯನಿರ್ಣಯ | ೭೫ | |
| ೪ | .. ರತ್ನಗಳ ಸಮುದ್ರ | ಬ್ರಹ್ಮಸೂತ್ರಭಾಷ್ಯ | ೭೩ | |
| ೫ | .. ಒಳ್ಳೆಯ ಸ್ನೇಹಿತ | ಭಾಗವತತಾತ್ಪರ್ಯನಿರ್ಣಯ | ೭೭ | |
| ೬ | .. ಕಲ್ಪವೃಕ್ಷ | ತಂತ್ರಸಾರಸಂಗ್ರಹ | ೭೮ | |
| ೭ | .. ಎರಡು ಕಣ್ಣುಗಳು | ಪ್ರಮಾಣ ಲಕ್ಷಣ ಮತ್ತುಕಥಾ ಲಕ್ಷಣ | ೭೯ | |

| | | | | |
|---|---|---|---|---|
| ೮ | .. ಅರ್ಜುನ | ವಿಷ್ಣುತತ್ವವಿನಿರ್ಣಯ | ೮೦ | |
| ೯ | .. ಬೆಂಕಿಯ ಕಿಡಿಗಳು | ಪ್ರಕರಣ ಗ್ರಂಥಗಳು | ೮೧ | |
| ೧೦ | ಶ್ರೀಮಧ್ವಾಚಾರ್ಯರ ಆದೇಶದಂತೆ ತ್ರಿವಿಕ್ರಮಪಂಡಿತಾಚಾರ್ಯರಿಂದ ರಚಿತವಾದಗ್ರಂಥಯಾವುದು? | ತತ್ವಪ್ರದೀಪ | ೭೨ | |
| ೧೧ | ತ್ರಿವಿಕ್ರಮಪಂಡಿತಾಚಾರ್ಯರ ಪ್ರಾರ್ಥನೆಯಂತೆ ಶ್ರೀಮಧ್ವಾಚಾರ್ಯರು ರಚಿಸಿದ ಗ್ರಂಥಯಾವುದು? | ಅನುವ್ಯಾಖ್ಯಾನ | ೮೮ | |
| ೧೨ | ಶ್ರೀಮಧ್ವಾಚಾರ್ಯರು ಏಕಕಾಲದಲ್ಲಿ ನಾಲ್ಕು ಜನ ಶಿಷ್ಯರಿಂದ ಬರೆಸಿದ ಗ್ರಂಥಯಾವುದು? | ಅನುವ್ಯಾಖ್ಯಾನ | ೮೯ | |
| ೧೩ | ಅನುವ್ಯಾಖ್ಯಾನದ ಯುಕ್ತಿಗಳನ್ನು ತಿಳಿಸಲು ಸ್ವಯಂ ಶ್ರೀಮದಾಚಾರ್ಯರೇ ರಚಿಸಿದ ಮತ್ತೊಂದು ಕೃತಿ ಯಾವುದು? | ನ್ಯಾಯವಿವರಣ | ೯೦ | |
| ೧೪ | ಶ್ರೀಮಧ್ವಾಚಾರ್ಯರ ಶಿಷ್ಯರಲ್ಲಿ ತಾವು ಅಗ್ರಗಣ್ಯರಾಗಬೇಕೆಂದು ಬಯಸಿ ಅದಕ್ಕೆ ಬೇಕಾದ ಉತ್ಕೃಷ್ಟವಾದ ಸಾಧನೆಯನ್ನು ಮಾಡಿದವರು ಯಾರು? | ಶ್ರೀ ವಿಷ್ಣುತೀರ್ಥರು | ೧೦೨ | ವಿಷ್ಣುತೀರ್ಥರ ಚರಿತ್ರೆ |
| ೧೫ | ಪೂರ್ವಾಶ್ರಮದತಂದೆ ತಾಯಿಗಳ ಮರಣದ ನಂತರ ಶ್ರೀ ಮದ್ವಾಚಾರ್ಯರುಪಾಜಕಕ್ಷೇತ್ರಕ್ಕೆ ಬರಲುಕಾರಣವೇನು? | ಸನ್ಯಾಸವನ್ನು ನೀಡಲು | ೯೫ | |
| ೧೬ | ವಿಷ್ಣುತೀರ್ಥರು ಪಂಚಗವ್ಯವನ್ನು ಸ್ವೀಕರಿಸುತ್ತಾ ನಂತರ ಅದನ್ನು ತ್ಯಜಿಸಿ ಅದ್ಭುತವಾದತಪಸ್ಸನ್ನು ಮಾಡಿದ ಸ್ಥಳ ಯಾವುದು? | ಹರಿಶ್ಚಂದ್ರ ಪರ್ವತ | ೧೦೪ | |
| ೧೭ | ಶ್ರೀಮಧ್ವಾಚಾರ್ಯರ ಶಿಷ್ಯರಲ್ಲಿಯಾರ ಮಹಿಮೆಯನ್ನು ಪೂರ್ಣವಾಗಿ ಹೇಳಲು ಗ್ರಂಥಕಾರರು ಸೋತಿದ್ದಾರೆ ? | ವಿಷ್ಣು ತೀರ್ಥರ | ೧೧೩ | |
| ೧೮ | ಯಾರ ಪ್ರಾರ್ಥನೆಯಂತೆ ವಿಷ್ಣು ತೀರ್ಥರು ಉಡುಪಿಗೆ ಬಂದರು? | ಅನಿರುದ್ಧತೀರ್ಥರ | ೧೧೬ | |
| ೧೯ | 'ಮಹಾತ್ಮರಲ್ಲಿ ಮಹಾತ್ಮರು' ಎಂಬ ಹೆಗ್ಗಳಿಕೆಯನ್ನು ಸಂಪಾದಿಸಿದ ಮಧ್ವಾಚಾರ್ಯರ ಪ್ರಶಿಷ್ಯರು ಯಾರು? | ಬಾದರಾಯಣತೀರ್ಥರು | ೧೧೮ | |
| ೨೦ | ಮನುಷ್ಯರಿಗೆ ಹೋಗಲು ಅಸಾಧ್ಯವಾದ ಯಾವ ಪರ್ವತಕ್ಕೆ ಶ್ರೀ ವಿಷ್ಣುತೀರ್ಥರುಹೋದರು ? | ಕುಮಾರ ಪರ್ವತ | ೧೧೯ | |
| ೨೧ | ಗೋದಾವರಿತೀರದಿಂದ ಬಂದ ಶ್ರೀ ಮದ್ವಾಚಾರ್ಯರ ಪ್ರಮುಖ ಶಿಷ್ಯರಿವರು. | ಪದ್ಮನಾಭತೀರ್ಥರು | ೧೨೦ | ಪ್ರದ್ಮನಾಭ ತೀರ್ಥರ ಮಹಿಮೆ |
| ೨೨ | ಪದ್ಮನಾಭತೀರ್ಥರಿಗೆ ಲೋಕ ನೀಡಿದ ಪ್ರಶಸ್ತಿ ಯಾವುದು ?ವೇದ ಪ್ರವಚನಆಚಾರ್ಯ ಶಿಷ್ಯ | ವೇದಪ್ರವಚನ ಆಚಾರ್ಯಶಿಷ್ಯ | ೧೨೬ | |
| ೨೩ | ಶ್ರೀಮಧ್ವಾಚಾರ್ಯರ ಗೃಹಸ್ಥ ಶಿಷ್ಯರಲ್ಲಿ ತ್ರೇತಾಗ್ನಿಗಳಂತೆ ಇರುವವರುಯಾರು? | ಲಿಕುಚಕುಲತಿಲಕರು | ೧೩೫ | ಲಿಕುಚಕುಲಮ ಹಿಮೆ |
| ೨೪ | ಲಿಕುಚ ಕುಲದವರಲ್ಲಿದ್ದ ವಿಶೇಷವಾದ ಒಂದು ದೀಕ್ಷೆಯಾವುದು? | ಯಾವಕಾರಣಕ್ಕೂ ಮಧ್ವಾಚಾರ್ಯರಆದೇಶವನ್ನು ಮೀರಬಾರದು | ೧೩೬ | |
| ೨೫ | ಕಣ್ವತೀರ್ಥದ ಯಾವಸ್ಥಳದಲ್ಲಿ ಮಧ್ವಾಚಾರ್ಯರು ಚಾತುರ್ಮಾಸ್ಯವ್ರತವನ್ನು ಕೈಗೊಂಡರು? | ಸನ್ಮಠ(ತಾಂತ್ಯ) | ೧೪೦ | |
| | **ಸರ್ಗ ೧೬** | | | |
| ೧ | ಶ್ರೀಮಧ್ವಾಚಾರ್ಯರ ಮುಂದೆ ಒಬ್ಬ ಶೂದ್ರರಾಜನು ವೇದಪ್ರಾಮಾಣ್ಯವನ್ನು ಆಕ್ಷೇಪಿಸಿದ್ದು ಯಾವ ಸ್ಥಳದಲ್ಲಿ ? | ಗೋಮತೀತೀರದಲ್ಲಿ | ೧ | ವೇದ ಪ್ರಾಮಾಣ್ಯ ಸಮರ್ಥನೆ |
| ೨ | ಶೂದ್ರರಾಜನು ಯಾವ ಸೂಕ್ತವನ್ನು ಅಪ್ರಮಾಣ ಎಂದು ಆಕ್ಷೇಪಿಸಿದ್ದ ? | ಓಷಧೀಸೂಕ್ತ | ೫ | |
| ೩ | ರಾತ್ರಿಯ ಹೊತ್ತು ದೀಪ ಶಾಂತವಾದಾಗ ಯಾವ ಪ್ರಕಾಶದಿಂದ ಶ್ರೀಮಧ್ವಾಚಾರ್ಯರು ಪಾಠವನ್ನುಮಾಡಿದರು ? | ಕಾಲಿನ ಹೆಬ್ಬರಳಿನ ಉಗುರಿನತುದಿಯಿಂದ | ೬ | ಶ್ರೀಮಧ್ವಾಚಾರ್ಯರ ತೇಜಸ್ಸು |

| | | | | |
|---|---|---|---|---|
| ೪ | ಯಾವ ನದಿಯ ವೇಗವನ್ನುತಡೆಯಲು ಶ್ರೀಮಧ್ವಾಚಾರ್ಯರು ದೊಡ್ಡ ಬಂಡೆಯನ್ನುಅಡ್ಡಲಾಗಿಇಟ್ಟರು ? | ತುಂಗಭದ್ರಾನದಿ | ೭ | ಭೀಮನಂತೆ ಬಂಡೆಯನ್ನಿಟ್ಟದ್ದು |
| ೫ | ಶ್ರೀಮಧ್ವಾಚಾರ್ಯರು ಕಣ್ವತೀರ್ಥಕ್ಕೆ ಸಮುದ್ರಸ್ನಾನಕ್ಕಾಗಿ ಬಂದ ಸಂದರ್ಭಯಾವುದು ? | ಸೂರ್ಯಗ್ರಹಣ | ೧೧ | ಸಮುದ್ರಸ್ನಾನ |
| ೬ | ಸಮುದ್ರದ ಲಾವಣ್ಯ ಮತ್ತು ಶ್ರೀಮಧ್ವಾಚಾರ್ಯರ ಲಾವಣ್ಯಇವೆರಡರಲ್ಲಿ ಜನರಿಗೆ ಇಷ್ಟವಾದದ್ದು ಯಾವುದು ? | ಶ್ರೀಮಧ್ವಾಚಾರ್ಯರ ಲಾವಣ್ಯ | ೧೫ | |
| ೭ | ಕಣ್ವತೀರ್ಥದ ಸಮುದ್ರತೀರದಲ್ಲಿ ಮಧ್ವಾಚಾರ್ಯರು ವೇದದ ಯಾವ ಭಾಗವನ್ನು ಪಾಠಮಾಡಿದರು ? | ಐತರೇಯಶಾಖೆಯ ಸೂಕ್ತ | ೧೬ | |
| ೮ | ಶ್ರೀಮಧ್ವಾಚಾರ್ಯರ ದೃಷ್ಟಿಯಿಂದ ಅಬ್ಬರದ ಸಮುದ್ರವುಕೆರೆಯಂತೆ ಶಾಂತವಾದದ್ದುಎಲ್ಲಿ ? | ಕಣ್ವತೀರ್ಥ | ೨೩ | |
| ೯ | ಶ್ರೀಕಾಂತೇಶ್ವರ ದೇವಾಲಯದಲ್ಲಿ ೩೦ ಜನ ಸೇರಿ ತಂದಿದ್ದ ಧ್ವಜಸ್ತಂಭವನ್ನು ಒಬ್ಬನೇ ಎತ್ತಿಟ್ಟ ಮಲ್ಲ ಯಾರು ? | ಗಂಡವಾಟ (ಕೋಡಿಂಜಾಡಿ) | ೨೬ | ಶ್ರೀಮಧ್ವಾಚಾರ್ಯರ ದೇಹದಾಢ್ಯ |
| ೧೦ | ಗಂಡವಾಟ ಸಹೋದರರು ಶ್ರೀಮಧ್ವಾಚಾರ್ಯರ ಮುಂದೆ ಒಮ್ಮೆ ಸೋತಾಗ ಯಾವ ಸವಾಲನ್ನು ಮತ್ತೊಮ್ಮೆ ನೀಡಲಾಯಿತು ? | ನೆಲದ ಮೇಲಿಟ್ಟ ಬೆರಳನ್ನು ಎತ್ತುವುದು | ೨೯ | |
| ೧೧ | ಶ್ರೀಮಧ್ವಾಚಾರ್ಯರು ಒಬ್ಬ ವಟುವಿನ ಮೇಲೆ ಕುಳಿತು ಪ್ರದಕ್ಷಿಣೆ ಬಂದುತಮ್ಮ ಲಘಿಮಾಸಿದ್ದಿಯನ್ನು ತೋರಿಸಿದ ಸ್ಥಳ ಯಾವುದು ? | ನರಸಿಂಹ ದೇವಾಲಯ | ೩೦ | |
| ೧೨ | ೫೦ ಜನ ಹಿಡಿದುತಂದಿದ್ದ ಏಣಿಯನ್ನು ಎಕಾಂಗಿಯಾಗಿ ತಂದಿಟ್ಟಿದ್ದ ಪೂರ್ವವಾಟನು (ಮೂಡೇಂಬಾಡಿ) ಶ್ರೀಮಧ್ವಾಚಾರ್ಯರ ಯಾವ ಸಾಮರ್ಥ್ಯವನ್ನು ತಡೆಯಲು ಪ್ರಯತ್ನಿಸಿದ ? | ಪ್ರವಚನದಧ್ವನಿಯನ್ನು | ೩೧ | |
| ೧೩ | ನೈವೇದ್ಯ ಉತ್ಸವಾದಿಗಳಿಂದ ವಂಚಿತವಾಗಿದ್ದಯಾವ ದೇವಾಲಯದ ವ್ಯವಸ್ಥೆಯನ್ನು ಶ್ರೀಮಧ್ವಾಚಾರ್ಯರು ಸರಿಮಾಡಿದರು ? | ಪಾರಂತೀದೇವಾಲಯ | ೩೬ | ಅನೇಕ ಮಹಿಮೆಗಳು |
| ೧೪ | ಶ್ರೀಮಧ್ವಾಚಾರ್ಯರು ಗ್ರೀಷ್ಮಕಾಲದಲ್ಲಿ ಮಳೆಯನ್ನು ತರಿಸಿದ ಸ್ಥಳ ಯಾವುದು ? | ಸರಿದಂತರ (ಇಡೇತುದೆ) | ೩೮ | |
| ೧೫ | ವೈದ್ಯನಾಥೇಶ್ವರನ ಸನ್ನಿಧಾನದಲ್ಲಿ ಶ್ರೀಮಧ್ವಾಚಾರ್ಯರಿಂದ ರಚಿತವಾದಗ್ರಂಥ ಯಾವುದು ? | ಕೃಷ್ಣಾಮೃತಮಹಾರ್ಣವ | ೪೦ | |
| ೧೬ | ಶ್ರೀಮಧ್ವಾಚಾರ್ಯರು ಕರ್ಮಠ ವಿದ್ವಾಂಸರನ್ನು ಸೋಲಿಸಿ ನಾರಾಶಂಸಿ ಎನ್ನುವ ಮಂತ್ರಪ್ರಭೇದವನ್ನು ವ್ಯಾಖ್ಯಾನಿಸಿದ ಸ್ಥಳ ಯಾವುದು ? | ಉಚ್ಛಭೂತಿ (ಉಜಿರೆ) | ೪೧ | |
| ೧೭ | ಶ್ರೀಮಧ್ವಾಚಾರ್ಯರ ಮಹಿಮೆಯನ್ನು ದೇವಸಭೆಯಲ್ಲಿ ಹಾಡಿದವರಾರು ? | ಗಂಧರ್ವರು | ೪೯ | |
| ೧೮ | ಮಧ್ವಾಚಾರ್ಯರುಯಾವ ಪಾಠವನ್ನು ಮಾಡುತ್ತಿದ್ದಾಗ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು ? | ಐತರೇಯೋಪನಿಷತ್ತು | ೫೪ | |